ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಮೆ l l ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬೆಳಗಾಂ -ವಿರುದ್ಧ ಸಿಬಿಐ ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 66630/2012

ಆಜ್ಞೆ

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

ರಿಟ್ ಅರ್ಜಿಸಂಖ್ಯೆ: 66630/2012 ಮತ್ತು ರಿಟ್ ಅರ್ಜಿಸಂಖ್ಯೆ: 60631/2012 ರಲ್ಲಿನ ಅರ್ಜಿದಾರರು ಒಬ್ಬರೇ ಆಗಿದ್ದಾರೆ.ರಿಟ್ ಅರ್ಜಿಸಂಖ್ಯೆ: 66630/2012 ರಲ್ಲಿ ಸಿಆರ್‌ಪಿಸಿಯ 482 ನೇ ಪ್ರಕರಣದೊಂದಿಗೆ ಓದಲಾದ, ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇದಗಳನ್ನು ಅನ್ವಯಿಸುವ ಮೂಲಕ, ಸಿಬಿಐ D ಸಿ.ಸಿ.ಸಂಖ್ಯೆ:5/2011 ರಲ್ಲಿನ ಅನುಬಂಧ – ಬಿ ಯಲ್ಲಿರುವಂತೆ 1 ನೇ ಪ್ರತ್ಯರ್ಜಿದಾರ--ಸಿಬಿಐ ಸಲ್ಲಿಸಿದ ಹಾಗೂ ಬೆಂಗಳೂರಿನ XLVIII ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ಕಡತದಲ್ಲಿ ಈಗ ವಿಶೇಷ ಸಿಬಿಐ ಸಿ.ಸಿ.ಸಂಖ್ಯೆ: 76/2012 ಎಂದು ಸಂಖ್ಯೆಯನ್ನು ನೀಡಲಾಗಿರುವದಿನಾಂಕ: 29.12.2010 ರ ಆರೋಪಪಟ್ಟಿಯನ್ನು ರದ್ದುಗೊಳಿಸಿ ಸರ್ಷಿಯೋರರಿ ಸ್ವರೂಪದ ರಿಟ್ಟಾಗಿ ಕೋರಿರುತ್ತಾರೆ.ಅಷ್ಟೇ ಅಲ್ಲದೆ, ನಿಷೇಧದ ಸ್ವರೂಪದಲ್ಲಿ ರಿಟ್ ಅನ್ನು ಕೋರಿರುತ್ತಾರೆ ಮತ್ತು ಮೇಲೆ ಹೇಳಲಾದ ವ್ಯವಹರಣೆಗಳಲ್ಲಿ ಇಡೀ ವ್ಯವಹರಣೆಗಳನ್ನು ರದ್ದು ಪಡಿಸಿ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ಇತರ ಪರಿಹಾರವನ್ನು/ಗಳನ್ನು ಅಂಗೀಕರಿಸುವಂತೆ ಕೋರಿರುತ್ತಾರೆ.ಸಿಬಿಐ ಸಿ.ಸಿ.ಸಂಖ್ಯೆ:1/2011 ರಲ್ಲಿನ ಅನುಬಂಧ-ಬಿ ಯಲ್ಲಿರುವಂತೆ 1 ನೇ ಪ್ರತ್ಯರ್ಜಿದಾರ ಸಿಬಿಐ ಸಲ್ಲಿಸಿದ ಹಾಗೂ ಬೆಂಗಳೂರಿನ XLVIII ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ಕಡತದಲ್ಲಿ ಈಗ ವಿಶೇಷ ಸಿಬಿಐ ಸಿ.ಸಿ.ಸಂಖ್ಯೆ: 81/2012 ಎಂದು ಸಂಖ್ಯೆಯನ್ನು ನೀಡಲಾಗಿರುವದಿನಾಂಕ: 10.05.20110 ಆರೋಪಪಟ್ಟಿಯನ್ನು ರದ್ದುಗೊಳಿಸಿ ಸರ್ಷಿಯೋರರಿ ಸ್ವರೂಪದ ರಿಟ್ ನೀಡಲು ರಿಟ್ ಅರ್ಜಿಸಂಖ್ಯೆ: 66631/2012 ರಲ್ಲಿ ಈ ನ್ಯಾಯಾಲಯವನ್ನು ಕೋರಿರುತ್ತಾರೆ ಹಾಗೂ ನಿಷೇಧದ ರೂಪದಲ್ಲಿ ರಿಟ್ ಅನ್ನು ಕೋರಿರುತ್ತಾರೆ.ಜೊತೆಗೆ, ಮೇಲೆ ಹೇಳಲಾದ ವ್ಯವಹರಣೆಗಳಲ್ಲಿ ಇಡೀ ವ್ಯವಹರಣೆಗಳನ್ನು ರದ್ದುಪಡಿಸಿ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಸೂಕ್ತವೆಂದು ಭಾವಿಸುವ ಅಂಥ ಇತರ ಪರಿಹಾರವನ್ನು/ಗಳನ್ನು ಅಂಗೀಕರಿಸುವಂತೆ ಕೋರಿರುತ್ತಾರೆ.

2. 1 ನೇ ಅರ್ಜಿದಾರನು ಸಾಲ ಮಂಜೂರಾತಿಗಾಗಿ, ಕಾರ್ಯನಿರ್ವಹಣಾ ಬಂಡವಾಳಕ್ಕಾಗಿ 2 ನೇ ಪ್ರತ್ಯರ್ಜಿದಾರರ ಪರವಾಗಿ ಸ್ವತಂತ್ರವಾದ ಮತ್ತು ಹಕ್ಕುದಾರಿಕೆಯ ದಾಸ್ತಾನು ಮಳಿಗೆಯಲ್ಲಿದ್ದ ಸಕ್ಕರೆ ದಾಸ್ತಾನನ್ನು ಅಡಮಾನವಿಡಲು ಸಿದ್ಧನಾಗಿದ್ದಾನೆಂದು ಹೇಳಿದಿನಾಂಕ: 17.5.2006 ರಂದು ಅರ್ಜಿದಾರರು 2 ನೇ ಪ್ರತ್ಯರ್ಜಿದಾರರನ್ನು ಸಂಪರ್ಕಿಸಿದ್ದಾರೆಂದು ರಿಟ್ ಅರ್ಜಿಸಂಖ್ಯೆ: 66630/2012 ರ ಅರ್ಜಿಯಲ್ಲಿ ಅರ್ಜಿದಾರರು ಹೇಳಿದ್ದಾರೆ ಮತ್ತುದಿನಾಂಕ: 12.06.2006 ರಂದು ಸದರಿ ಮನವಿಯ ಅನುಸಾರವಾಗಿ, ಪ್ರತಿವಾದಿಸಂಖ್ಯೆ: 2 ರ ಬೆಳಗಾವಿಯ ಹಿರಿಯ ವ್ಯವಸ್ಥಾಪಕರು ರೂ .1,20,25,500 ಕೆ.ಜಿ. ಸಕ್ಕರೆಯ ಕೆಸಿಸಿ ಮಿತಿಯನ್ನು ಶಿಫಾರಸು ಮಾಡಿರುತ್ತಾರೆ ಮತ್ತು ತರುವಾಯ ಭೂಮಿ ಮತ್ತು ಕಟ್ಟಡಗಳ ಇಎಂಟಿಗೆ ಹಾಗೂ ಮೊದಲ ಶುಲ್ಕ ಆಧಾರವಾಗಿ

ಬಿಡಿಸಿಸಿ ಬ್ಯಾಂಕಿನಲ್ಲಿ ಈಗಿನ ಮತ್ತು ಭವಿಷ್ಯದ ಎಲ್ಲಾ ಚರಾಸ್ತಿಗಳನ್ನು ಅಡಮಾನವಿಡುವುದಕ್ಕೆ ಒಳಪಟ್ಟುದಿನಾಂಕ: 21.07.2006 ರಂದು ಮಂಜೂರಾತಿ ಕೋರಿಕೆ ಪತ್ರವನ್ನು ಹೊರಡಿಸಿದ್ದಾರೆ ಮತ್ತು ಅದಕ್ಕನುಸಾರವಾಗಿದಿನಾಂಕ: 16.08.2006 ರಂದು ಶ್ರೀ ಆರ್.ವಿ. ಮಧುಸೂಸನ್ ಹಾಗೂ ಶ್ರೀ ಅಶೋಕ್ ಆರ್. ಪಾಟೀಲ್ರವರು ಸಾಲಗಳು/ಮುಂಗಡಕ್ಕೆ ಸಂಬಂಧಿಸಿದಂತೆ ತಿಳಿವಳಿಕೆ ಪತ್ರದ ಮೇರೆಗಿನ ಡಿಮ್ಯಾಂಡ್ ಪ್ರಾಮಿಸರಿ ಹಾಗೂ ಅಡಮಾನ ಇಡಲಾದ ಸಕ್ಕರೆಯ ಸ್ಥಾವರ ಮತ್ತು ಯಂತ್ರಗಳ ಪಾರ್ಶ್ವಿಕ ಭದ್ರತೆಗೆ ಸಂಬಂಧಿಸಿದಂತೆ ಒಪ್ಪಂದ ಪತ್ರದಂತಹ ಭದ್ರತಾ ದಸ್ತಾವೇಜುಗಳನ್ನು ಕಾರ್ಯಗತಗೊಳಿಸಿದರು ಮತ್ತು ತತ್ಪರಿಣಾಮವಾಗಿ, 2 ನೇ ಪ್ರತ್ಯರ್ಜಿದಾರ ಬ್ಯಾಂಕು 17.08.2006 ರಂದು 700 ಕೋಟಿ ರೂಪಾಯಿಗಳ ಮೊತ್ತವನ್ನು ಬಿಡುಗಡೆ ಮಾಡಿತು ಹಾಗೂ ಪುನಃ 27.7.2006 ರಂದು ಅರ್ಜಿದಾರರ ವ್ಯವಸ್ಥಾಪಕ ನಿರ್ದೇಶಕರು ಕಬ್ಬು ಬೆಳೆಯ ಬಿಲ್ಲಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಎರಡು ತಿಂಗಳುಗಳ ಅವಧಿಗೆ 2.50 ಕೋಟಿ ರೂಪಾಯಿಗಳ ತಾರ್ತಿಕ ಕೆಸಿಸಿ ಪರಿಮಿತಿಗಳ ಮಂಜೂರಾತಿಗಾಗಿ 2 ನೇ ಪ್ರತ್ಯರ್ಜಿದಾರರಿಗೆ ಮನವಿ ಮಾಡಿರುತ್ತಾರೆ.ದಿನಾಂಕ: 31.10.2007 ರಂದು ಅರ್ಜಿದಾರರ ವ್ಯವಸ್ಥಾಪಕ ನಿರ್ದೇಶಕರು 2.50 ಕೋಟಿ  ರೂ.ಗಳ ತಾರ್ತಿಕ ಕೆಸಿಸಿ ಪರಿಮಿತಿಯನ್ನು ಪಡೆಯುವುದಕ್ಕೆ ಸಾಲದ ದಾಖಲೆಗಳನ್ನು ಮತ್ತು 2626,500 ಕೆ.ಜಿ. ಸಕ್ಕರೆಯನ್ನು ಅಡವಿಡುವುದಕ್ಕೆ ಸಂಬಂಧಿಸಿದಂತೆ ನಗದು ಸಾಲಕ್ಕೆ ಸಂಬಂಧಿಸಿದ ಅಡಮಾನಪತ್ರವನ್ನು ಸಹ ಕಾರ್ಯಗತಗೊಳಿಸಿರುತ್ತಾರೆ ಮತ್ತು ಅರ್ಜಿದಾರರು ಹಣವನ್ನು ಮರುಪಾವತಿಸಲು ವಿಫಲರಾಗಿದ್ದಾರೆ ಹಾಗೂ ಅರ್ಜಿದಾರರು ಇತರ ಆರೋಪಿಗಳೊಂದಿಗೆ ಮತ್ತು 2 ನೇ ಪ್ರತ್ಯರ್ಜಿದಾರ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸೇರಿ ಪಿತೂರಿ ನಡೆಸಿದ್ದಾರೆಂಬ ಬಗ್ಗೆ 2 ನೇ ಪ್ರತ್ಯರ್ಜಿದಾರರಿಗೆ ತಿಳಿದಾಗ ಮತ್ತು ಅರ್ಜಿದಾರರ ಸ್ಥಾವರ ಮತ್ತು 0 ಯಂತ್ರೋಪಕರಣಗಳನ್ನು ಯಾವುದೇ ಬ್ಯಾಂಕಿಗೆ ಅಡವಿಟ್ಟಿಲ್ಲವೆಂದು ಸುಳ್ಳು ಮನವಿಯನ್ನು ಮಾಡಿದ್ದರೆಂದು, ವಾಸ್ತವವಾಗಿ, ಅದನ್ನು ಬೆಳಗಾವಿಯ ಬಿಡಿಸಿಸಿ ಬ್ಯಾಂಕಿನಲ್ಲಿ ಅಡವಿಟ್ಟಿದ್ದರೆಂದು ತಿಳಿದುಬಂತು ಹಾಗೂ 2 ನೇ ಪ್ರತ್ಯರ್ಜಿದಾರ ಬ್ಯಾಂಕಿಗೆ ಅಡವಿಟ್ಟಿದ್ದ ಸಕ್ಕರೆಯ ದಾಸ್ತಾನಿನಲ್ಲಿ ಸಕ್ಕರೆಯ ಕೊರತೆಯಿದ್ದು, ಅರ್ಜಿದಾರರ ಅಧಿಕಾರಿಗಳು ಬ್ಯಾಂಕಿನ ಒಪ್ಪಿಗೆ ಪಡೆಯದೆ, ಅಡವಿಟ್ಟಿದ್ದ ಸಕ್ಕರೆಯ ದಾಸ್ತಾನನ್ನು ಗೋಡೌನಿನಿಂದ ತೆಗೆದು ಮಾರಿರುತ್ತಾರೆ ಮತ್ತು ಅರ್ಜಿದಾರರು ಬ್ಯಾಂಕಿಗೆ ವಂಚನೆ ಮಾಡಿದ್ದಾರೆಂದು ಇದರಿಂದಾಗಿ ಬ್ಯಾಂಕಿಗೆ 10.37 ಕೋಟಿ ರೂಪಾಯಿಯ ನಷ್ಟವಾಗಿದೆಯೆಂದು ಎರಡನೇ ಪ್ರತ್ಯರ್ಜಿದಾರ ಬ್ಯಾಂಕು ಒಂದನೇ ಪತ್ಯರ್ಜಿದಾರರಲ್ಲಿ ದೂರು ದಾಖಲಿಸಿತು.

ದೂರಿನ ಆಧಾರದ ಮೇಲೆ ಎಫ್ಐಆರ್ನಲ್ಲಿ ಮೊಕದ್ದಮೆಯನ್ನು ದಾಖಲಿಸಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ.ಆದ್ದರಿಂದ, ಅರ್ಜಿದಾರರು ತಮಗೆ ಯಾವುದೇ ಇತರ ಪರಿಣಾಮಕಾರಿ ಮತ್ತು ಫಲಕಾರಿ ಪರಿಹಾರವಿಲ್ಲವೆಂದು ವಾದಿಸಿ, ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ ಮತ್ತು ಅರ್ಜಿದಾರರು ಹಾಗೂ ಇತರರ ವಿರುದ್ಧ ಪ್ರಾರಂಭಿಸಿರುವ ವ್ಯವಹರಣೆಗಳನ್ನು ರದ್ದುಪಡಿಸಲು ಈ ನ್ಯಾಯಾಲಯವನ್ನು ಕೋರಿ, ರಿಟ್ ಅಧಿಕಾರವ್ಯಾಪ್ತಿಯನ್ನು ಕೋರಿದ್ದಾರೆ.

3. ರಿಟ್ ಅರ್ಜಿಸಂಖ್ಯೆ: 66631/2012 ರಲ್ಲಿ, ಅರ್ಜಿದಾರರು ಈ ಮುಂದಿನಂತೆ ವಾದಿಸಿರುತ್ತಾರೆ.ದಿನಾಂಕ: 10.02.2007 ರಂದು ನಗದು ಸಾಲಕ್ಕಾಗಿ (10 ಕೋಟಿ  ರೂ. ಗಳ ಅಡಮಾನ ಸಾಲ) 2 ನೇ ಪ್ರತ್ಯರ್ಜಿದಾರರಿಗೆ

ಮನವಿಪತ್ರವನ್ನು ನೀಡಿದ್ದಾರೆ ಮತ್ತು 2 ನೇ ಪ್ರತ್ಯರ್ಜಿದಾರ ಬ್ಯಾಂಕು ಅದನ್ನು ಮುಂದಿನ ಪ್ರಕ್ರಿಯೆಗೊಳಪಡಿಸಿ,ದಿನಾಂಕ: 22.10.2007 ರಂದು ಪ್ರಾದೇಶಿಕ ಕಚೇರಿಗೆ ಪ್ರಸ್ತಾವನೆಯನ್ನು ಶಿಫಾರಸು ಮಾಡಿ ಕಳಿಸಿತು ಮತ್ತು ಅದಕ್ಕೆ ಪ್ರತಿಯಾಗಿ ಪ್ರಾದೇಶಿಕ ಕಛೇರಿಯು ಚೆನ್ನೈನ ಪ್ರಧಾನ ಕಚೇರಿಗೆ 20.00 ಕೋಟಿ ರೂ.ಗಳ ಮಂಜೂರಾತಿಗಾಗಿ ಶಿಫಾರಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿತು ಮತ್ತು ಯುಬಿಐ ಚೆನ್ನೈನ ಜನರಲ್ ಮ್ಯಾನೇಜರ್ರವರ ಕಚೇರಿಯು ಸ್ಥಾವರ ಮತ್ತು ಯಂತ್ರೋಪಕರಣಗಳ ಅಡಮಾನ ಭದ್ರತೆಯನ್ನು 11.3.2007 ರಂದು ಮೊದಲೇ ಏಕೆ ನಿಗದಿಪಡಿಸಿಲ್ಲ?ಎಂಬ ಬಗ್ಗೆ ಬೆಳಗಾವಿಯ ಎಜಿಎಂಗೆ ಪತ್ರ ಬರೆದಿರುತ್ತದೆ ಮತ್ತು ಅದಕ್ಕೆ ಪ್ರತಿಯಾಗಿ, 2 ನೇ ಆರೋಪಿಯು ದೂರಿನಲ್ಲಿ ಅರ್ಜಿದಾರರ ಕಾರ್ಖಾನೆಯ ಸ್ಥಾವರ ಮತ್ತು ಯಂತ್ರೋಪಕರಣಗಳು ಕೆನರಾ ಬ್ಯಾಂಕಿಗೆ ಅಥವಾ ಯಾವುದೇ ಇತರ ಬ್ಯಾಂಕಿಗೆ ಅಡಮಾನ ಇಡಲಾಗಿಲ್ಲವೆಂದುದಿನಾಂಕ: 12.3.2007 ರಂದು ಬೆಳಗಾವಿಯ ಎಜಿಎಂಗೆ ಪತ್ರ ಬರೆದಿರುತ್ತಾರೆ ಮತ್ತುದಿನಾಂಕ: 22.03.2007 ರಂದು ಸದರಿ ಪತ್ರವನ್ನು ಅನುಸರಿಸಿ, ಯುಬಿಐ ಚೆನ್ನೈನ ಜನರಲ್ ಮ್ಯಾನೇಜರ್ರವರ ಕಚೇರಿಯು ಸಾಲವನ್ನು ಎಂದರೆ, ನಗದು ಸಾಲವನ್ನು (ರೂ .10 ಕೋಟಿಗಳ ಅಡಮಾನ ಸಾಲದ ಮಿತಿ) ಮಂಜೂರು ಮಾಡಿತು.ಅರ್ಜಿದಾರರು ಮತ್ತು ಇತರ ಆರೋಪಿಗಳು ಕೆನರಾ ಬ್ಯಾಂಕಿನ ಪರವಾಗಿ ಮುಂಚಿನ ಋಣಭಾರವನ್ನು ಸೃಜಿಸಿ ವಂಚನೆ ಎಸಗಿದ್ದಾರೆಂದು 2 ನೇ ಪ್ರತ್ಯರ್ಜಿದಾರರಿಗೆ ಅರಿವಾದಾಗ, ಇದರಲ್ಲಿನ ಅರ್ಜಿದಾರರು ಮತ್ತು ಇತರ ಆರೋಪಿಗಳು 2 ನೇ ಪ್ರತ್ಯರ್ಜಿದಾರ ಬ್ಯಾಂಕಿಗೆ ವಂಚನೆ ಎಸಗಿದ್ದಾರೆಂದು 2 ನೇ ಪ್ರತ್ಯರ್ಜಿದಾರರು 1 ನೇ ಪ್ರತ್ಯರ್ಜಿದಾರ-ಸಿಬಿಐಗೆ ದೂರನ್ನು ಸಲ್ಲಿಸಿದ್ದರು ಮತ್ತು 1 ನೇ ಅರ್ಜಿದಾರರ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಯಾವುದೇ ಬ್ಯಾಂಕಿನಲ್ಲಿ ಅಡಮಾನ ಮಾಡಲಾಗಿದೆಯೆಂಬುದಾಗಿ 2 ನೇ ಆರೋಪಿಯು ಸುಳ್ಳು ಮನವಿಯನ್ನು ಮಾಡಿದ್ದಾನೆಂದು, ಆದರೆ ವಾಸ್ತವವಾಗಿ, ಅದನ್ನು ಬೆಳಗಾವಿಯ ಬಿಡಿಸಿಸಿ ಬ್ಯಾಂಕು ಹಾಗೂ ಕೆನರಾ ಬ್ಯಾಂಕಿನಲ್ಲಿ ಅಡಮಾನ ಇಡಲಾಗಿತ್ತೆಂದು ದೂರಿನಲ್ಲಿ ಆರೋಪ ಮಾಡಲಾಗಿದೆ.ಅಷ್ಟೇ ಅಲ್ಲದೆ, 2 ರಿಂದ 7 ರವರೆಗಿನ ಆರೋಪಿಗಳು 1 ನೇ ಆರೋಪಿಯೊಂದಿಗೆ ಸೇರಿ ಪಿತೂರಿ ನಡೆಸಿದ್ದಾರೆಂದು ಆಪಾದಿಸಲಾಗಿದೆ ಮತ್ತು ಈ ಕಾರಣದಿಂದಾಗಿ ಬೆಳಗಾವಿಯ ಬಿಡಿಸಿಸಿ ಬ್ಯಾಂಕಿನಿಂದ ಹಾಗೂ ಕೆನರಾ ಬ್ಯಾಂಕಿನಿಂದ ಇದರಲ್ಲಿನ 1 ನೇ ಅರ್ಜಿದಾರನ ಕ್ರೆಡಿಟ್ ವರದಿಯನ್ನು ಪಡೆಯದೆ, 1 ನೇ ಅರ್ಜಿದಾರ ಸೊಸೈಟಿಯ ಬೈ-ಲಾ ಗಳ (ಉಪ ವಿಧಿ) ಅಡಿಯಲ್ಲಿ ಸಾಲವನ್ನು ಪಡೆಯಲು ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್ ರ್ರವರ ಪೂರ್ವಾನುಮತಿಯನ್ನು ಪಡೆಯದೆ, ಇದರಲ್ಲಿನ 1 ನೇ ಅರ್ಜಿದಾರರ ಪ್ರಸ್ತಾವನೆಯನ್ನು 1 ನೇ ಆಪಾದಿತರು ಶಿಫಾರಸು ಮಾಡಿದ್ದಾರೆ ಮತ್ತು ಸಕ್ಕರೆಯ ಗುಣಮಟ್ಟವನ್ನು ಸಹ ಖಾತರಿಪಡಿಸಿರಲಿಲ್ಲ ಮತ್ತು ಅಷ್ಟೇ ಅಲ್ಲದೆ, 1 ನೇ ಆಪಾದಿತನು ಇತರ ಆಪಾದಿತರ ಸೂಚನೆಯ 0 ಮೇರೆಗೆ ಸಮುಚಿತ ಪ್ರಾಧಿಕಾರದಲ್ಲಿ ನೋಂದಾಯಿತವಾದ ಅಡಮಾನ ಪತ್ರವನ್ನು ಪಡೆದಿಲ್ಲ ಹಾಗೂ ಗೊತ್ತುಪಡಿಸಲಾದ ಮಂಜೂರಾತಿಯ ಅನುಸರಣಾ ವರದಿಯನ್ನು ಸಲ್ಲಿಸಿಲ್ಲ ಎಂಬುದು ನಂತರದ ಆರೋಪವಾಗಿದೆ.ಅಲ್ಲದೆ, 2 ರಿಂದ 7 ರ ವರೆಗಿನ ಆಪಾದಿತರು ಬ್ಯಾಂಕಿನ ಒಪ್ಪಿಗೆಯನ್ನು ಪಡೆಯದೆ, ಗೋದಾಮಿನಿಂದ ಅಡಮಾನ ಮಾಡಲಾಗಿದ್ದ ಸಕ್ಕರೆ ದಾಸ್ತಾನು ತೆಗೆದು ಮಾರಾಟ ಮಾಡಿರುತ್ತಾರೆ.ಆ ಮೂಲಕ ಅವರು ಬ್ಯಾಂಕನ್ನು ವಂಚಿಸಿದ್ದಾರೆ.ಇದರಿಂದಾಗಿ ಬ್ಯಾಂಕು ರೂ .10.72 ಕೋಟಿ ನಷ್ಟವನ್ನು ಅನುಭವಿಸಿದೆ ಹಾಗೂ 2 ನೇ ಪ್ರತ್ಯರ್ಜಿದಾರರಿಗೂ ನಷ್ಟವಾಗಿರುತ್ತದೆ.

4. 2 ನೇ ಪ್ರತ್ಯರ್ಜಿದಾರರು ದೆಹಲಿ ವಿಶೇಷ ಪೊಲೀಸ್ ಸ್ಥಾಪನಾ ಅಧಿನಿಯಮ, 1946 ರ ಉಪಬಂಧಗಳ ಅಡಿಯಲ್ಲಿ ಅಗತ್ಯಪಡಿಸಲಾದಂತೆ, ಕರ್ನಾಟಕ ಸರ್ಕಾರದ ಅಗತ್ಯ ಅನುಮೋದನೆ ಮತ್ತು ಮಂಜೂರಾತಿ ಪಡೆಯದೆ ಹಾಗೂ ಯಾವುದೇ ಸಮರ್ಥನೆಗಳಿಲ್ಲದೆ ಅರ್ಜಿದಾರ ಮತ್ತು 1 ನೇ ಪ್ರತ್ಯರ್ಜಿದಾರರ ವಿರುದ್ಧ 2 ನೇ

ಪ್ರತ್ಯರ್ಜಿದಾರರು ಕ್ರಿಮಿನಲ್ ಪ್ರಾಸಿಕ್ಯೂಷನನ್ನು ಪ್ರಾರಂಭಿಸಿದ್ದಾರೆ ಮತ್ತು ಅರ್ಜಿದಾರ ಹಾಗೂ ಇತರರ ವಿರುದ್ಧ ಆರೋಪಪಟ್ಟಿಯನ್ನು ಸಹ ಸಲ್ಲಿಸಿದೆ ಮತ್ತು ಆದ್ದರಿಂದ, ರಿಟ್ ಅಧಿಕಾರವ್ಯಾಪ್ತಿಯನ್ನು ಕೋರಿ, ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಿದ್ದಾರೆಂದು ರಿಟ್ ಅರ್ಜಿಯಲ್ಲಿ ಅರ್ಜಿದಾರರು ವಾದಿಸಿದ್ದಾರೆ.

5. ಎರಡೂ ರಿಟ್ ಅರ್ಜಿಗಳಲ್ಲಿ, ಗೌರವಾನ್ವಿತ ನ್ಯಾಯಾಲಯದ ಮುಂದೆ ದೂರಿನಲ್ಲಿ ಇದರಲ್ಲಿನ ಪ್ರತ್ಯರ್ಜಿದಾರನು, ಇದರಲ್ಲಿನ ಅರ್ಜಿದಾರರು, ಅಪ್ರಾಮಾಣಿಕ ಉದ್ದೇಶ ಇಟ್ಟುಕೊಂಡಿದ್ದರೆಂದು ಅಥವಾ ಕಾನೂನು ಬಾಹಿರ ಅಥವಾ ಘಾತುಕವಾದ ಯಾವುದೇ ಕೃತ್ಯವನ್ನು ಮಾಡುವ ಉದ್ದೇಶ ಹೊಂದಿದ್ದರೆಂದು ಊಹಿಸಲು ಯಾವುದೇ ದಾಖಲೆಯನ್ನು ಅಥವಾ ಗಟ್ಟಿಯಾದ ಆಧಾರವನ್ನು ನೀಡಿರುವುದಿಲ್ಲ ಹಾಗೂ ಮೇಲ್ನೋಟಕ್ಕೆ ಇದರಲ್ಲಿನ ಪ್ರತ್ಯರ್ಜಿದಾರರು ಮಾಡಿದ ಆರೋಪಗಳು ಕೇವಲ ಹುರುಳಿಲ್ಲದ ಆರೋಪಗಳು ಹಾಗೂ ಪ್ರತಿಪಾದನೆಗಳಾಗಿವೆ ಮತ್ತು ಅದರಂತೆ, ಈ ದೂರನ್ನು ಪ್ರಾರಂಭದಲ್ಲಿಯೇ ತಿರಸ್ಕರಿಸಲು ಅರ್ಹವಾಗಿದೆ ಎಂದು ವಾದಿಸಲಾಗಿದೆ.1 ನೇ ಪ್ರತ್ಯರ್ಜಿದಾರನು ಸಮುಚಿತ ಪ್ರಾಧಿಕಾರದಿಂದ ಎಂದರೆ, ಸಹಕಾರ ಸಂಘಗಳ ರಿಜಿಸ್ಟ್ರಾರ ರರಿಂದ ಅರ್ಜಿದಾರರ ಮೇಲೆ ಕ್ರಮ ಜರುಗಿಸಲು ಮಂಜೂರಾತಿಯನ್ನು ಸಹ ಪಡೆದಿಲ್ಲ.ಹೀಗಾಗಿ ಕಾನೂನು ಕ್ರಮ ಜರುಗಿಸಲು ಅತ್ಯಾವಶ್ಯಕವಾದ ಮಂಜೂರಾತಿಯನ್ನು ಪಡೆಯದೆ, ಆರೋಪಪಟ್ಟಿಯನ್ನು ಸಲ್ಲಿಸುವುದು ಅಸಂಬದ್ಧವಾಗಿದೆ ಮತ್ತು ಆದ್ದರಿಂದ, ಆರೋಪಪಟ್ಟಿಯು ಪ್ರಾರಂಭದಲ್ಲಿಯೇ ರದ್ದುಗೊಳಿಸಲು ಅರ್ಹವಾಗಿದೆ ಎಂಬುದು ಮತ್ತೊಂದು ವಾದವಾಗಿದೆ.

6. ಅರ್ಜಿದಾರರ ಪರ ವಕೀಲರು ಸಂಬಂಧಪಟ್ಟ ಬ್ಯಾಂಕನ್ನು ಸಂಪರ್ಕಿಸಿದ್ದಕ್ಕಾಗಿ ದಾಖಲೆಗಳನ್ನು ಸಹ ಲಗತ್ತಿಸಿದ್ದಾರೆ ಮತ್ತು ತದನಂತರ ಮಂಜೂರಾತಿ ಪತ್ರಗಳನ್ನು ನೀಡಿ ದಾಸ್ತಾನು ಹಾಗೂ ಸಕ್ಕರೆಯನ್ನು ಅಡವಿಟ್ಟಿರುತ್ತಾರೆ ಮತ್ತು ಅರ್ಜಿದಾರರು ವಂಚನೆ ಮಾಡಿದ್ದಾರೆಂಬ ಆಪಾದನೆಯು ಸಮರ್ಥನೀಯವಾಗಿಲ್ಲವೆಂದು ವಾದಿಸಿದ್ದಾರೆ ಮತ್ತು ನಿರ್ದಿಷ್ಟ ಅಡವಿಟ್ಟ ಹಾಗೂ ಅಡಮಾನ ಮಾಡಲಾದ ಸರಕುಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಸಾಲವನ್ನು ಪಾವತಿಸಿಲ್ಲವೆಂಬ ಆರೋಪವು ಏನೇ ಆದರೂ ಕರಾರಿನ ಉಲ್ಲಂಘನೆಯಾಗಿದೆ ಮತ್ತು ಅದನ್ನು ಒಂದು ಅಪರಾಧವೆನ್ನಲು ಸಾಧ್ಯವಿಲ್ಲ ಮತ್ತು ಅರ್ಜಿದಾರರ ವಿರುದ್ಧ ಅನ್ವಯಿಸಲಾದ ಅಪರಾಧಗಳು ಅರ್ಜಿದಾರರ ವಿರುದ್ಧ ಅನ್ವಯಿಸಲಾದ ಅಪರಾಧಗಳ ಅಂಶಗಳನ್ನು ಆಕರ್ಷಿಸುವುದಿಲ್ಲ.ಅಷ್ಟೇ ಅಲ್ಲದೆ, ಇದು ಕೇವಲ ನಾಗರಿಕ ಕಾನೂನಿನ ಉಲ್ಲಂಘನೆಯೇ ಹೊರತು ಕ್ರಿಮಿನಲ್ ಅಪರಾಧದ ಉಲ್ಲಂಘನೆಯಲ್ಲ ಎಂಬುದು ಸುಸ್ಥಾಪಿಸಲಾದ ಕಾನೂನಾಗಿದೆ ಮತ್ತು ಆದ್ದರಿಂದ ಅದು ರದ್ದುಗೊಳಿಸಲು ತಕ್ಕುದಾಗಿದೆ ಎಂದು ವಾದಿಸಲಾಗಿದೆ ಮತ್ತು ಮುಂದುವರೆಸುತ್ತಾ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 ರ 13 ( 2) ಮತ್ತು 13 ( 1) (ಡಿ) ಯೊಂದಿಗೆ ಓದಲಾದ 120 ಬಿ ಪ್ರಕರಣದ ಅಡಿಯಲ್ಲಿನ ಅಪರಾಧವೂ ಸಹ ಸಮರ್ಥನೀಯವಲ್ಲ ಎಂದು ಎಂದು ವಾದಿಸಲಾಗಿದೆ ಮತ್ತು ವ್ಯವಹರಣೆಗಳನ್ನು ಮುಂದುವರೆಸಲು ಸಂಪೂರ್ಣವಾಗಿ ಯಾವುದೇ ಸಾಕ್ಷ್ಯವು ಇಲ್ಲದಿರುವುದರಿಂದ ಅರ್ಜಿದಾರನ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ಪ್ರಾರಂಭದಲ್ಲೇ ರದ್ದುಗೊಳಿಸಲು ತಕ್ಕುದಾಗಿದೆ.

7. ಪ್ರತ್ಯರ್ಜಿದಾರ ಸಿಬಿಐ ರಿಟ್ ಅರ್ಜಿಸಂಖ್ಯೆ: 66630/2012 ರಲ್ಲಿ ವಿವರವಾದ ಆಕ್ಷೇಪಣೆಗಳನ್ನು ಸಲ್ಲಿಸಿದೆ ಮತ್ತು ರಿಟ್ ಅರ್ಜಿಯನ್ನು ವ್ಯವಹರಣೆಗಳ ವಿಳಂಬಿತ ಹಂತದಲ್ಲಿ ಸಲ್ಲಿಸಲಾಗಿದೆ ಮತ್ತು ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದ ಮುಂದೆ ತನ್ನ ಬಿಡುಗಡೆಗಾಗಿ ಪ್ರಯತ್ನಿಸಿದ್ದಾನೆ ಮತ್ತು ಅರ್ಜಿದಾರನು ಅದರಲ್ಲಿ ಯಶಸ್ವಿಯಾಗದಿದ್ದಾಗ, ಅರ್ಜಿದಾರನು ಈ ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ

ಎಂದು ವಾದಿಸಲಾಗಿದೆ.ಅಷ್ಟೇ ಅಲ್ಲದೆ, 2 ನೇ ಪ್ರತ್ಯರ್ಜಿದಾರರ ದೂರಿನ ಆಧಾರದ ಮೇಲೆ ಮೊಕದ್ದಮೆಯನ್ನು ದಾಖಲಿಸಿ ತನಿಖೆಯನ್ನು ನಡೆಸಲಾಗಿದೆ.ತನಿಖೆಯ ಅವಧಿಯಲ್ಲಿ, ಅರ್ಜಿದಾರರು ಮತ್ತು ಇತರ ಆಪಾದಿತ ವ್ಯಕ್ತಿಗಳು 2 ನೇ ಪ್ರತ್ಯರ್ಜಿದಾರರ ವಿರುದ್ಧ ವಂಚನೆ ಎಸಗಿದ್ದಾರೆ ಎಂದು ಕಂಡುಬಂದಿದೆ ಮತ್ತು 2 ನೇ ಪ್ರತ್ಯರ್ಜಿದಾರನಿಂದ ಸಾಲವನ್ನು ಪಡೆದಿರುವುದು ಮತ್ತು ದುರುದ್ದೇಶದಿಂದ, ಬ್ಯಾಂಕಿನ ಒಪ್ಪಿಗೆಯನ್ನು ಪಡೆಯದೆ, ಅಡವಿಡಲಾಗಿದ್ದ ದಾಸ್ತಾನನ್ನು ತೆಗೆದುಕೊಂಡಿರುವುದು ಮತ್ತು ಆಪಾದಿತ ವ್ಯಕ್ತಿಗಳು ವಂಚನೆಯಲ್ಲಿ ಭಾಗಿಗಳಾಗಿದ್ದರು ಎಂಬುದು ತನಿಖೆಯಿಂದ ಬಹಿರಂಗಗೊಂಡಿದೆ ಮತ್ತು ಆಕ್ಷೇಪಣೆಗಳನ್ನು, ವಂಚನೆಯಲ್ಲಿ ಭಾಗಿಯಾದ ಪ್ರತಿಯೊಬ್ಬ ಆಪಾದಿತ ವ್ಯಕ್ತಿಗಳ ಪಾತ್ರವನ್ನು ಸವಿವರವಾಗಿ ಸಲ್ಲಿಸಲಾಗಿದೆ.ಅದಲ್ಲದೆ, ಅರ್ಜಿದಾರರ ಸಂಘದ ಅಧಿಕಾರಿಗಳು ಮತ್ತು ಪದಾಧಿಕಾರಿಗಳು ಲಭ್ಯವಿರುವ ಸಕ್ಕರೆ ದಾಸ್ತಾನುಗಳನ್ನು ಗೋಡೌನ್ಸಂಖ್ಯೆ: ಬಿ] ಬಿ 2 ನಿಂದ ಮೋಸದಿಂದ ತೆಗೆದಿದ್ದಾರೆಂದು ತನಿಖೆಯಿಂದ ತಿಳಿದುಬಂದಿದೆ ಎಂದು ನಿರ್ದಿಷ್ಟವಾಗಿ ವಾದಿಸಲಾಗಿದೆ.ಅಕ್ಟೋಬರ್ 2008 ರ ಸಮಯದಲ್ಲಿ ಕೆನರಾ ಬ್ಯಾಂಕಿನ ಸುಪರ್ದಿಯಲ್ಲಿ ಬೀಗ ಹಾಕಿ ಅಡಮಾನ ಮಾಡಲಾಗಿದ್ದ ಸಕ್ಕರೆ ದಾಸ್ತಾನನ್ನು ನಕಲು ಕೀಲಿಗಳನ್ನು ಬಳಸಿ ತೆಗೆದುಕೊಂಡಿದ್ದಾರೆಂದು ವಾದಿಸಿದ್ದಾರೆ.ಅಕ್ಟೋಬರ್ 2008 ರ ಸಮಯದಲ್ಲಿ, ಕೆನರಾ ಬ್ಯಾಂಕಿನ ಗಮನಕ್ಕೆ ಬರದಂತೆ ಅಥವಾ ಅದರ ಒಪ್ಪಿಗೆ ಪಡೆಯದೆ, ಗೋದಾಮುಸಂಖ್ಯೆ: ಬಿ 1 ಬಿ 2 ನಿಂದ 3,78,000 ಕೆ.ಜಿ. ಸಕ್ಕರೆ ದಾಸ್ತಾನನ್ನು ತೆಗೆದು ಮಾರಾಟ ಮಾಡಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿದೆ ಮತ್ತು ಮುಂಗಡ ಪಾವತಿ/ನೇರ ಪಾವತಿಗೆ ಪ್ರತಿಯಾಗಿ ಮಾರಾಟಗಳನ್ನು ಮಾಡಿದ್ದರೂ, ಸಕ್ಕರೆಯ ಸಾಲ ಮಾರಾಟವನ್ನು ತೋರಿಸಲು, ಗೋಕಾಕ್ನ ಮೆಸರ್ಸ್ ಜಿಎಸ್ಎಸ್ಕೆಎನ್ ರವರ ಲೆಕ್ಕ ಪುಸ್ತಕಗಳನ್ನು ಮೋಸದಿಂದ ತಿದ್ದಲಾಗಿತ್ತು/ಮೋಸದಿಂದ ಬದಲಾಯಿಸಲಾಗಿತ್ತು ಎಂದು ಹೆಚ್ಚಿನ ತನಿಖೆಯಿಂದ ತಿಳಿದು ಬಂದಿರುತ್ತದೆ.ಮಾರಾಟದ ಸಕ್ಕರೆ ದಾಸ್ತಾನಿನ ಮಾರಾಟದಿಂದ ಬಂದ ಆದಾಯವನ್ನು ಕೆನರಾ ಬ್ಯಾಂಕಿನಲ್ಲಿರುವ ಸಾಲದ ಖಾತೆಗೆ ಜಮಾ ಮಾಡಿರುವುದಿಲ್ಲ ಮತ್ತು ಪಾವತಿ ಮಾಡಲು ವಿಫಲವಾಗಿದೆ ಹಾಗೂ ಇದರಿಂದಾಗಿ, 26.01.2011 ರಂದು ಇದ್ದಂತೆ, ಬ್ಯಾಂಕಿಗೆ 10,72,24,382/- ರೂ.ಗಳಷ್ಟು ಅಕ್ರಮ ನಷ್ಟವುಂಟಾಗಿದೆ ಮತ್ತು ರಿಟ್ ಅರ್ಜಿಗಳ ಸಂಬಂಧಪಟ್ಟ ಕಂಡಿಕೆಗಳಲ್ಲಿ ಮಾಡಿದ ಇತರ ಆರೋಪಗಳನ್ನು ನಿರಾಕರಿಸಿತು ಹಾಗೂ ಮುಂದುವರೆಸುತ್ತಾ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾದ ಸಾಕ್ಷ್ಯದಿಂದ ಅರ್ಜಿದಾರರು ಮತ್ತು ಇತರ ಆಪಾದಿತರ ೨ ವಿರುದ್ಧದ ಅಪರಾಧವು ಸ್ಪಷ್ಟವಾಗಿ ಸಾಬೀತಾಗುತ್ತದೆಂದು ಇನ್ನಷ್ಟು ವಾದಿಸಲಾಗಿದೆ.ಆದ್ದರಿಂದ, ಈ ನ್ಯಾಯಾಲಯವು ವ್ಯವಹರಣೆಗಳನ್ನು ರದ್ದುಗೊಳಿಸಲು ರಿಟ್ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಲು ಸಾಧ್ಯವಿಲ್ಲ.

ಅರ್ಜಿದಾರರು ಮತ್ತು ಇತರ ಆಪಾದಿತರ ವಿರುದ್ಧ ಆಪಾದಿಸಲಾದ ಅಪರಾಧಗಳು ದೃಢಪಟ್ಟಿವೆ ಮತ್ತು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾದ ಸಾಕ್ಷ್ಯಗಳಿಂದಲೂ ಅದನ್ನು ಸಾಬೀತುಪಡಿಸಲಾಗಿದೆ.ಹಾಗಾಗಿ ಅರ್ಜಿಯನ್ನು ವಜಾ ಮಾಡಲು ಈ ನ್ಯಾಯಾಲಯವನ್ನು ಕೋರಲಾಗಿದೆ.

8. ರಿಟ್ ಅರ್ಜಿಸಂಖ್ಯೆ: 66631/2012 ರಲ್ಲಿ ಸಹ 1 ನೇ ಪ್ರತಿವಾದಿ-ಸಿಬಿಐ ವಿವರವಾದ ಆಕ್ಷೇಪಣೆಗಳನ್ನು ಸಲ್ಲಿಸಿದೆ ಮತ್ತು ಆಕ್ಷೇಪಣೆಗಳಲ್ಲಿಯೂ ಸಹ ಖುಲಾಸೆ ಆದೇಶವನ್ನು ಪಡೆಯಲು ಮಾಡಲಾದ ಪ್ರಯತ್ನಕ್ಕೆ ಸಂಬಂಧಿಸಿದಂತೆ, ರಿಟ್ ಅರ್ಜಿಸಂಖ್ಯೆ: 66630/2012 ರಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪುನರುಚ್ಚರಿಸಿದೆ

ಮತ್ತು ಅವು ಯಶಸ್ವಿಯಾಗದಿದ್ದಾಗ ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿದೆ.ಅರ್ಜಿದಾರನು ಕೆನರಾ ಬ್ಯಾಂಕಿನ ಪರವಾಗಿ ಸ್ಥಾವರ ಮತ್ತು ಯಂತ್ರೋಪಕರಣಗಳು ಮತ್ತು ಸಕ್ಕರೆ ದಾಸ್ತಾನುಗಳನ್ನು ಅಡಮಾನ ಮಾಡಿದ್ದರೂ, ಆ ಅಡಮಾನ ಮಾಡಿದ ವಿಷಯವನ್ನು ಮರೆಮಾಡಿ ಕೆನರಾ ಬ್ಯಾಂಕಿಗೆ ಅಥವಾ ಇನ್ಯಾವುದೇ ಬ್ಯಾಂಕಿಗೆ ಯಾವುದೇ ಅಡಮಾನ ಮಾಡಲಾಗಿಲ್ಲವೆಂದು ಹೇಳಿ ಸುಳ್ಳು ದಸ್ತಾವೇಜುಗಳನ್ನು ಸಿದ್ಧಪಡಿಸಿ 2 ನೇ ಪ್ರತ್ಯರ್ಜಿದಾರರಿಂದ ಸಾಲವನ್ನು ಪಡೆದುಕೊಂಡಿದೆ ಮತ್ತು ಅರ್ಜಿದಾರರು ಎರಡನೇ ಪ್ರತಿವಾದಿಗೆ ವಂಚನೆ ಮಾಡಿದ್ದಾರೆ ಮತ್ತು 2008 ರಲ್ಲಿ ವಂಚನೆ ಮಾಡುವ ಮೂಲಕ ಯಾವುದೇ ಬ್ಯಾಂಕಿನ ಪರವಾಗಿ ಅಡಮಾನ ಮಾಡಲಾಗಿಲ್ಲ ಎಂದು ನಿರೂಪಿಸಿ, ಸಾಲವನ್ನು ಪಡೆದುಕೊಂಡಿದ್ದಾರೆ.ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಗಮನಕ್ಕೆ ಬರದಂತೆ ಅಥವಾ ಅದರ ಒಪ್ಪಿಗೆ ಪಡೆಯದೆ 2008 ರ ಅಕ್ಟೋಬರ್‌ನಲ್ಲಿ ದಾಸ್ತಾನನ್ನು ತೆಗೆದು ಅದನ್ನು ಮಾರಾಟ ಮಾಡಿದ್ದಾರೆ.ಸಕ್ಕರೆ ದಾಸ್ತಾನು ಮಾರಾಟದಿಂದ ಬಂದ ಹಣವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿರುವ ಸಾಲದ ಖಾತೆಗೆ ಜಮಾ ಮಾಡಲಾಗಿಲ್ಲ.ಅಸ್ತಿತ್ವದಲ್ಲಿ ಇಲ್ಲದ ಸಂಸ್ಥೆಗಳ ಹೆಸರಿನಲ್ಲಿ ಸಕ್ಕರೆಯ ಮಾರಾಟವನ್ನು ತೋರಿಸಲು, ಖಾತೆಗಳ ಪುಸ್ತಕಗಳನ್ನು ಸಹ ಮೋಸದಿಂದ ತಿದ್ದಲಾಗಿದೆ/ಬದಲಾಯಿಸಲಾಗಿದೆ ಎಂಬುದನ್ನು ತನಿಖೆಯು ಬಹಿರಂಗಪಡಿಸಿದೆ ಎಂದು ವಾದಿಸಿ ಪ್ರತ್ಯರ್ಜಿದಾರನು ವಿವರವಾದ ಆಕ್ಷೇಪಣೆ ಸಲ್ಲಿಸಿದ್ದಾನೆ.ಪ್ರತ್ಯರ್ಜಿದಾರರು ಸಹ ರಿಟ್ ಅರ್ಜಿಯಲ್ಲಿ ಕಂಡಿಕೆಗಳಿಗನುಸಾರವಾಗಿ ವಿವರವಾಗಿ ಮಾಡಲಾದ ದೃಢಕ್ತಿಗಳನ್ನು ನಿರಾಕರಿಸುತ್ತಾ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳೆರಡೂ ಅರ್ಜಿದಾರರ ವಿರುದ್ಧ ಆಪಾದಿಸಲಾದ ಅಪರಾಧವನ್ನು ಸ್ಪಷ್ಟವಾಗಿ ಸಾಬೀತುಗೊಳಿಸುತ್ತದೆ ಎಂದು ವಾದಿಸಿದ್ದಾರೆ.ದೂರು ಸಮರ್ಥನೀಯವಲ್ಲ ಮತ್ತು ಸಿಬಿಐ ನಿಂದ ಕ್ರಿಮಿನಲ್ ಮೊಕದ್ದಮೆಯನ್ನು ಪ್ರಾರಂಭಿಸುವುದು ಮತ್ತು ವಿಶೇಷ ನ್ಯಾಯಾಲಯದ ಮುಂದೆ ಬಾಕಿ ಉಳಿದಿರುವುದು ಕಾನೂನಿನ ಅಧಿಕಾರವಿಲ್ಲದೆ ನಡೆದಿದೆ ಎಂಬಂತಹ ಅರ್ಜಿದಾರರ ವಾದಗಳು ಸಂಪೂರ್ಣವಾಗಿ ಸುಳ್ಳಾಗಿವೆ ಹಾಗೂ ಸಂಗತಿಗಳ ಗುಣಾವಗುಣಗಳನ್ನು ವಿವೇಚಿಸದೆ ಮಾಡಿರುವಂಥದ್ದಾಗಿವೆ.ಆರಂಭದಲ್ಲಿ ಅರ್ಜಿದಾರರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಸುಳ್ಳು ಮನವಿಪತ್ರವನ್ನು ಸಲ್ಲಿಸಿದ್ದರು ಮತ್ತು ಆ ಮೂಲಕ ನಿಧಿಗಳನ್ನು ಹಂಚಿಕೊಳ್ಳಲು ಬ್ಯಾಂಕನ್ನು ಪ್ರೇರೇಪಿಸಿದರು ಎಂದು ವಾದಿಸಲಾಗಿದೆ.ಇದಲ್ಲದೆ, ಬ್ಯಾಂಕಿನಲ್ಲಿ ಅಡವಿಟ್ಟು ಬೀಗ ಹಾಕಿಟ್ಟಿದ್ದ ದಾಸ್ತಾನನ್ನು ನಕಲು ಕೀಲಿಗಳನ್ನು ಬಳಸಿ ವಂಚನೆಯಿಂದ ತೆಗೆದು ಲಭ್ಯವಿದ್ದ ದಾಸ್ತಾನನ್ನು ತೆಗೆಯಲಾಗಿದೆ ಹಾಗೂ ಮಾರಾಟದ ಹಣವನ್ನು ಬ್ಯಾಂಕಿಗೆ ಪಾವತಿಸಿಲ್ಲ.ಆದ್ದರಿಂದ, ಅರ್ಜಿದಾರರು ಮತ್ತು ಇತರ ಆಪಾದಿತರ ವಿರುದ್ಧ ಸಲ್ಲಿಸಿದ ಆರೋಪಪಟ್ಟಿಯನ್ನು ರದ್ದುಗೊಳಿಸಲು ಸಿಆರ್‌ಪಿಸಿ 482 ನೇ ಪ್ರಕರಣವನ್ನು ಅನ್ವಯಿಸಲು ಈ ನ್ಯಾಯಾಲಯಕ್ಕೆ ಸಾಧ್ಯವಿಲ್ಲ ಮತ್ತು ಆದ್ದರಿಂದ, ಅರ್ಜಿದಾರರು ಸಲ್ಲಿಸಿದ ಈ ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ.

9. ಎರಡೂ ಪ್ರಕರಣಗಳಲ್ಲಿ ಹಾಜರಾದ ಮಾನ್ಯ ವಕೀಲರು ಅಪರಾಧದ ದಾಖಲು ಮಾಡಿದ ನಂತರ, ತನಿಖೆ ನಡೆಸಿ, ಆರೋಪಪಟ್ಟಿಯನ್ನು ಸಲ್ಲಿಸಿದ ನಂತರ, ಅರ್ಜಿದಾರರು ರಿಟ್ ಅರ್ಜಿಸಂಖ್ಯೆ: 66630/2012 ರಲ್ಲಿ 2 ನೇ ಪ್ರತ್ಯರ್ಜಿದಾರ ಬ್ಯಾಂಕನ್ನು ಒಂದು ಬಾರಿಯ ಇತ್ಯರ್ಥಕ್ಕಾಗಿ ಸಂಪರ್ಕಿಸಿದ್ದಾರೆ ಎಂದು ವಾದಿಸಿದರು.ಪಕ್ಷಕಾರರು ಮತ್ತು 2 ನೇ ಪ್ರತ್ಯರ್ಜಿದಾರರ ನಡುವೆ ವಿಷಯವನ್ನು ಇತ್ಯರ್ಥಪಡಿಸಲಾಗಿದೆ.ಅರ್ಜಿದಾರರ ವಾದಕ್ಕೆ ಸಮರ್ಥನೆಯಾಗಿ ಅರ್ಜಿದಾರರು ಬ್ಯಾಂಕು ಒಂದೇ ಬಾರಿಯ ಇತ್ಯರ್ಥ ಮೊತ್ತವಾಗಿ ರೂ .13,50,00,000/-ಮತ್ತು ಬಡ್ಡಿ ಹಣ ರೂ. 3,05,890/-ಹಾಗೂ ಕಾನೂನು ಶುಲ್ಕ

4,99,000/- ರೂ.ಗಳ ಸಂದಾಯವನ್ನು ಅರ್ಜಿದಾರರಿಂದ ಸ್ವೀಕರಿಸಿದೆ ಎಂಬುದನ್ನು ದೃಢಪಡಿಸಿ, ಅಷ್ಟೇ ಅಲ್ಲದೆ, ಒಂದೇ ಬಾರಿಯ ಇತ್ಯರ್ಥದಿಂದಾಗಿ ಎರಡು ಸಾಲ ಖಾತೆಗಳನ್ನು ಮುಕ್ತಾಯಗೊಳಿಸಲಾಗಿದೆ ಎಂಬುದನ್ನು ದೃಢಪಡಿಸಿದಿನಾಂಕ: 26.3.2013 ರ ಎರಡನೇ ಪ್ರತ್ಯರ್ಜಿದಾರ ಬ್ಯಾಂಕಿನ ಪತ್ರವನ್ನು ಸಹ ಹಾಜರುಪಡಿಸಿದರು.

10. ಮಾನ್ಯ ವಕೀಲರು ಎರಡನೇ ಪ್ರತ್ಯರ್ಜಿದಾರನ ಬಳಿಯಿದ್ದ ಮೆಮೋ ಜೊತೆಗೆ ತೀರುವಳಿ ಪತ್ರದ (ಸೆಟಂಟ್ ಲೆಟರ್) ಪ್ರತಿಯನ್ನು ಸಹ ಹಾಜರುಪಡಿಸಿದ್ದಾರೆ ಮತ್ತು ಎರಡನೇ ಪ್ರತ್ಯರ್ಜಿದಾರ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ತಾನು 17,19,11,526/- ರೂ.ಗಳ ಒಟ್ಟು ಬಾಕಿಗೆ ಪ್ರತಿಯಾಗಿ ಸಂಪೂರ್ಣ ಹಾಗೂ ಅಂತಿಮ ತೀರುವಳಿಯಾಗಿ 11,20,00,000/- ರೂ.ಗಳ ಮೊತ್ತವನ್ನು ಸ್ವೀಕರಿಸಲಾಗಿದೆ ಎಂದು ಮತ್ತು ಅವರು ಸೃಜಿಸಿದ ತೀರುವಳಿ ಮತ್ತು ಭದ್ರತೆಯ ಬಗ್ಗೆ ರಾಜಿ ಒಪ್ಪಂದ ಮಾಡಿಕೊಳ್ಳುವ ಪಕ್ಷಕಾರರಾಗಿರುವ ವ್ಯಕ್ತಿಗಳನ್ನು ಮೇಲ್ಕಂಡ ಖಾತೆಯಲ್ಲಿ ಎಂದರೆ ಇದರಲ್ಲಿನ ಅರ್ಜಿದಾರರ ಖಾತೆಯಲ್ಲಿನ ಹೊಣೆಗಾರಿಕೆಗಳಿಂದ ಮುಕ್ತಗೊಳಿಸಲಾಗಿದೆಯೆಂದು ಹೇಳಿದಿನಾಂಕ: 30.12.2011 ರ ತೀರುವಳಿ ಪ್ರಮಾಣಪತ್ರವನ್ನು ನೀಡಿರುತ್ತದೆ.ಅರ್ಜಿದಾರರ ಪರ ಹಾಜರಾದ ವಕೀಲರು, ಪ್ರತ್ಯರ್ಜಿದಾರ ಬ್ಯಾಂಕು ಕೆನರಾ ಬ್ಯಾಂಕು ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನಡುವೆ ಮಾಡಿಕೊಂಡ, ತೀರುವಳಿಯ ಈ ಎರಡು ಪಾವತಿಗಳನ್ನು ಹಾಜರುಪಡಿಸುವ ಮೂಲಕ, ಈ ವಿಷಯವನ್ನು ಪಕ್ಷಕಾರರ ನಡುವೆ ಇತ್ಯರ್ಥಪಡಿಸಲಾಗಿದೆ ಮತ್ತು ಈ ಪ್ರಕರಣದಲ್ಲಿ ಎರಡನೇ ಪ್ರತ್ಯರ್ಜಿದಾರರಾಗಿ ಬಂದಿರುವ, ಸಂಬಂಧಪಟ್ಟ ಬ್ಯಾಂಕಿನ ಕಡೆಯಿಂದ ಯಾವುದೇ ಆಕ್ಷೇಪಣೆಯಿಲ್ಲ ಮತ್ತು ಅವರು ಯಾವುದೇ ಆಕ್ಷೇಪಣೆಗಳನ್ನು ಸಹ ಸಲ್ಲಿಸಿಲ್ಲ ಎಂದು ವಾದಿಸಿರುತ್ತಾರೆ ಮತ್ತು ಪಕ್ಷಕಾರರ ನಡುವೆ ಮಾಡಿಕೊಂಡ ಒಪ್ಪಂದದ ದೃಷ್ಟಿಯಿಂದ ವ್ಯವಹರಣೆಗಳನ್ನು ರದ್ದುಗೊಳಿಸಬೇಕಿದೆ ಮತ್ತು ವ್ಯವಹರಣೆಗಳನ್ನು 0 ಮುಂದುವರೆಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ವಾದಿಸಿದ್ದಾರೆ. ತಮ್ಮ ವಾದಕ್ಕೆ ಸಮರ್ಥನೆಯಾಗಿ, ಗ್ಯಾನ್ ಸಿಂಗ್ -ವಿರುದ್ದ--ಪಂಜಾಬ್ ರಾಜ್ಯ ಮತ್ತು ಇತರರು ' ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ, ಮತ್ತು ಸರ್ವೋಚ್ಚ ನ್ಯಾಯಾಲಯದ ಸಂಬಂಧಿತ ಚ ಕಂಡಿಕೆಯನ್ನು ಎಂದರೆ, ಕಂಡಿಕೆಸಂಖ್ಯೆ: 52, 53, 57, 58 ನ್ನು ನನ್ನ ಗಮನಕ್ಕೆ ತಂದಿದ್ದಾರೆ.ಅದರಲ್ಲಿ 58 ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಚ ಮುಂದಿನಂತೆ ಅಭಿಪ್ರಾಯಪಟ್ಟಿದೆ;

“58. ಅಪರಾಧಗಳು ಸಂಯುಕ್ತವಾಗಿಲ್ಲದಿದ್ದರೂ, ಅಪರಾಧಿ ಮತ್ತು ಬಾಧಿತ ವ್ಯಕ್ತಿಯ ನಡುವಿನ ವಿವಾದವನ್ನು ಬಗೆಹರಿಸಲಾಗಿದೆ ಎಂಬ ಅಂಶವನ್ನು ಪರಿಗಣಿಸಿ, ಉಚ್ಚನ್ಯಾಯಾಲಯವು ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸುತ್ತದೆಯೇ?ಎಂಬುದು ಅದರ ಅಭಿ ಪ್ರಾಯದ ಂ ತೆ, ಕ್ರಿಮಿನಲ್ ಮೊಕದ್ದಮೆಗಳನ್ನು ಮುಂದುವರೆಸುವುದು ವ್ಯರ್ಥ ಕಸರತ್ತಾಗುತ್ತದೆ ಮತ್ತು ಪ್ರಕರಣದಲ್ಲಿನ ಪಕ್ಷಕಾರರ ನಡುವಿನ ವಿವಾದವನ್ನು ಕೊನೆಗೊಳಿಸಬೇಕು ಹಾಗೂ ಶಾಂತಿಯನ್ನು ಪುನಃ ಸ್ಥಾಪಿಸಬೇಕು ಎಂದು ಒತ್ತಾಯಿಸುತ್ತದೆ; ನ್ಯಾಯೋದ್ದೇಶಗಳನ್ನು ಈಡೇರಿಸುವುದು ಅಂತಿಮ ಮಾರ್ಗದರ್ಶಿ ಅಂಶವಾಗಿದೆ.ನಿಸ್ಸಂದೇಹವಾಗಿ, ಅಪರಾಧಗಳು ಸಾರ್ವಜನಿಕರ ಮೇಲೆ ಹಾನಿಕಾರಕ ಪರಿಣಾಮ ಬೀರುವ ಕೃತ್ಯಗಳಾಗಿವೆ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಗಂಭೀರವಾಗಿ ಅಪಾಯವನ್ನುಂಟುಮಾಡುವ ಮತ್ತು ಬೆದರಿಕೆಯೊಡ್ಡುವಂತಹ ತಪ್ಪುಗಳನ್ನು ಒಳಗೊಂಡಿರುತ್ತವೆ ಮತ್ತು ಅಪರಾಧಿ ಮತ್ತು ಬಾಧಿತ ವ್ಯಕ್ತಿ ಂ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಿದ್ದಾರೆಂಬ ಅಥವಾ ಅಪರಾಧಿಯು ಬಾಧಿತ ವ್ಯಕ್ತಿಗೆ ನಷ್ಟ ಪರಿಹಾರವನ್ನು ನೀಡಿದ್ದಾನೆಂಬ

ಕಾರಣಮಾತ್ರಕ್ಕೆ ಅಪರಾಧ ಮಾಡಿದವರನ್ನು ಬಿಡುವುದು ಸುರಕ್ಷಿತವಲ್ಲ.ಆದರೂ ಕಾನೂನಿನಲ್ಲಿ ಕೆಲವು ಅಪರಾಧಗಳು ನ್ಯಾಯಾಲಯದ ಅ ಅನುಮತಿಯೊ ೦ ದಿಗೆ ಅಥವಾ ಅನುಮತಿಯಿಲ್ಲದೆ ರಾಜಿ ಮಾಡಿಕೊಳ್ಳಬಹುದಾದವುಗಳಾಗಿವೆ.ಕೊಲೆ ಅತ್ಯಾಚಾರ, ಡಕಾಯಿತಿ ಮುಂತಾದಂಥ ಗಂಭೀರ ಅಪರಾಧಗಳಿಗೆ ಸಂಬಂಧಿಸಿದಂತೆ, ಅಥವಾ ಐಪಿಸಿ ಅಡಿಯಲ್ಲಿ ಮಾನಸಿಕ ಅಧ:ಪತನದ ಇತರ ಅಪರಾಧಗಳು ಅಥವಾ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದಂತಹ ವಿಶೇಷ ಕಾನೂನುಗಳ ಅಡಿಯಲ್ಲಿ ನೈತಿಕ ಅಧಃಪತನದ ಅಪರಾಧ ಅಥವಾ ಅಪರಾಧಿಗಳ ಬಳಿ ಕೆಲಸ ಮಾಡುವಾಗ ಸರ್ಕಾರಿ ನೌಕರರು ಎಸಗಿದ ಅಪರಾಧಗಳಿಗೆ ಸಂಬಂಧಿಸಿದಂತೆ, ಬಾಧಿತ ವ್ಯಕ್ತಿಗೆ ಒಟ್ಟಾರೆಯಾಗಿ ಯಾವುದೇ ಕಾನೂನುಸಮ್ಮತ ಅಂಗೀಕಾರತೆ ಇರುವುದಿಲ್ಲ.ಆದಾಗ್ಯೂ, ನಾಗರಿಕ, ವ್ಯಾಪಾರ, ವಾಣಿಜ್ಯ, ಹಣಕಾಸು, ಪಾಲುದಾರಿಕೆ ಅಥವಾ ಅಂತಹ ವಹಿವಾಟುಗಳು ಅಥವಾ ವೈವಾಹಿಕತೆಯಿಂದ ಉಂಟಾಗುವ ಅಪರಾಧಗಳು, ಅದರಲ್ಲೂ ನಿರ್ದಿಷ್ಟವಾಗಿ, ವರದಕ್ಷಿಣೆ, ಇತ್ಯಾದಿಗಳಿಗೆ ಸಂಬಂಧಿಸಿದ, ಅಥವಾ ಕೌಟುಂಬಿಕ ವಿವಾದಗಳಿ ೦ ದ ಉಂಟಾಗುವ ಸಿವಿಲ್ ಸ್ವರೂಪವನ್ನು ಅಗಾಧವಾಗಿ ಮತ್ತು ಪ್ರಧಾನವಾಗಿ ಹೊಂದಿರುವ ಕೆಲವು ಅಪರಾಧಗಳಲ್ಲಿ, ತಪ್ಪು ಮೂಲತಃ ಬಾಧಿತ ವ್ಯಕ್ತಿಗೆ ಜರುಗಿದಲ್ಲಿ ಮತ್ತು ಅಪರಾಧಿ ಹಾಗೂ ಬಾಧಿತ ವ್ಯಕ್ತಿಯು ತಮ್ಮ ನಡುವಿನ ಎಲ್ಲಾ ವಿವಾದಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಂಡಿದ್ದಲ್ಲಿ, ಅಂತಹ ಅಪರಾಧಗಳನ್ನು ರಾಜಿ ಮಾಡಿಕೊಳ್ಳಲಾಗಿಲ್ಲವೆಂಬ ಅಂಶವನ್ನು ಲೆಕ್ಕಿಸದೆ ಉಚ್ಚ ಚ ನ್ಯಾಯಾಲಯಕ್ಕೆ ಅಂಥ ಇತ್ಯರ್ಥದ ಹಿನ್ನೆಲೆಯಲ್ಲಿ, ಅಪರಾಧಿಯು ಶಿಕ್ಷೆ ಎ ಅನುಭವಿಸುವ ಸಾಧ್ಯತೆ ಇಲ್ಲ ಮತ್ತು ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸದೆ ನ್ಯಾಯವು ಅನುದ್ದಿಷ್ಟವಾಗುತ್ತದೆ ಹಾಗೂ ನ್ಯಾಯೋದ್ದೇಶಗಳು ವಿಫಲವಾಗುತ್ತವೆ ಎಂದು ಮನವರಿಕೆಯಾದರೆ ಅದು ತನ್ನ ಅಂತರ್ಗತ ಅಧಿಕಾರದ ಚೌಕಟ್ಟಿನೊಳಗೆ ಕ್ರಿಮಿನಲ್ ವ್ಯವಹರಣೆ ಅಥವಾ ಕ್ರಿಮಿನಲ್ ದೂರು ಅಥವಾ ಎಫ್ಐಆರ್‌ನ್ನು ರದ್ದುಪಡಿಸುತ್ತದೆ.

11. ಬೇರೆ ರೀತಿಯಲ್ಲಿ ಹೇಳುವುದಾದರೆ, ಕ್ರಿಮಿನಲ್ ವ್ಯವಹರಣೆಯೊಂದಿಗೆ ಮುಂದುವರೆಯುವುದು ಅನುಚಿತವಾಗುತ್ತದೆಯೇ ಅಥವಾ ನ್ಯಾಯದ ಹಿತಾಸಕ್ತಿಗೆ ವಿರುದ್ಧವಾಗಿರುತ್ತದೆಯೇ?ಅಥವಾ ಕ್ರಿಮಿನಲ್ ವ್ಯವಹರಣೆಯ ಮುಂದುವರಿಕೆಯು ಬಾಧಿತ ವ್ಯಕ್ತಿ ಮತ್ತು ತಪ್ಪಿತಸ್ಥನ ನಡುವೆ ಇತ್ಯರ್ಥ ಮತ್ತು ರಾಜಿ ಆದರೂ ಕಾನೂನಿನ ಕ್ರಮದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಸರಿಸಮವಾಗಿರುತ್ತದೆಯೇ?ಮತ್ತು ನ್ಯಾಯೋದ್ದೇಶಗಳನ್ನು ಈಡೇರಿಸಲು, ಈ ಕ್ರಿಮಿನಲ್ ಮೊಕದ್ದಮೆಯನ್ನು ಕೊನೆಗೊಳಿಸುವುದು ಸೂಕ್ತವೇ?ಎಂಬುದನ್ನು ಉಚ್ಚ ನ್ಯಾಯಾಲಯವು ಪರಿಗಣಿಸಬೇಕು ಹಾಗೂ ಮೇಲ್ಕಂಡ ಪ್ರಶ್ನೆಗೆ (ಗಳಿಗೆ) ಉತ್ತರವು ಸಕಾರಾತ್ಮಕವಾಗಿದ್ದಲ್ಲಿ, ಉಚ್ಚ ನ್ಯಾಯಾಲಯವು ತನ್ನ ಚ ಅಧಿಕಾರವ್ಯಾಪ್ತಿಯೊಳಗೆ ಕ್ರಿಮಿನಲ್ ವ್ಯವಹರಣೆಯನ್ನು ರದ್ದುಪಡಿಸಲು ಸಾಧ್ಯವಿದೆ.

12. ಸಿವಿಲ್ ಕಾನೂನು ಮತ್ತು ಕ್ರಿಮಿನಲ್ ಕಾನೂನಿನ ಉಲ್ಲಂಘನೆಗೆ ಸಂಬಂಧಿಸಿದಂತೆ, ಇನ್ಫ್ರಾಸ್ಟ್ರಕ್ಚರ್ ಅಸಿಂಗ್ ಅಂಡ್ ಫೈನಾನ್ಸಿಯಲ್ ಸರ್ವಿಸಸ್ ಅಮಿಟೆಡ್ -ವಿರುದ್ಧ-ಬಿ.ಪಿ.ಎಲ್. ಅಮಿಟೆಡ್ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೂ ಸಹ ಅರ್ಜಿದಾರರ ಪರ ವಕೀಲರು ಚ ಅವಲಂಬಿಸಿದ್ದಾರೆ ಮತ್ತು ಅಡಮಾನ ಮತ್ತು ಅಡವುಗಳ ನಡುವಿನ ವ್ಯತ್ಯಾಸಕ್ಕೆ ಸಂಬಂಧಿಸಿದಂತೆಯೂ ಸಹ ಚರ್ಚಿಸಿರುತ್ತಾರೆ ಮತ್ತು ವಾಸ್ತವಿಕವಾದ ಅಡವು ಅಥವಾ ಅಡಮಾನ ಎಂಬುದು ಸಾಲವನ್ನು ಪಡೆಯುವ ಮತ್ತು ಶುಲ್ಕಗಳನ್ನು ಸೃಜಿಸುವ ಸಲುವಾಗಿ ಮಾತ್ರ ಇರುವುದಾಗಿದ್ದು ಅದನ್ನು ಸಾಧಿಸಲಾಗಿದೆಯೆ?ಎಂಬ ವಾಸ್ತವಿಕ ಉದ್ದೇಶವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ವಾದಿಸುತ್ತಾರೆ ಮತ್ತು ಈ ಮೊಕದ್ದಮೆಯಲ್ಲಿ ಸಿವಿಲ್ ಕಾನೂನಿನ

ಉಲ್ಲಂಘನೆ ಮಾಡಿದ ಆರೋಪವಿದ್ದರೂ, ಅರ್ಜಿದಾರರು ಬ್ಯಾಂಕಿನ ಪರವಾಗಿ ಹಣವನ್ನು ಪಾವತಿಸಿದ್ದಾರೆ ಎಂದು ವಾದಿಸಲಾಗಿದೆ.ಅಷ್ಟೇ ಅಲ್ಲದೆ, ಅನಿತಾ ಮರಿಯಾ ದಾಸ್ ಮತ್ತು ಇನ್ನೊಬ್ಬರು -ವಿರುದ್ಧ-ಮಹಾರಾಷ್ಟ್ರ ರಾಜ್ಯ ಮತ್ತು ಇನ್ನೊಬ್ಬರು ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೂ ಸಹ ವಕೀಲರು ಅವಲಂಬಿಸಿದ್ದಾರೆ.ಈ ತೀರ್ಪನ್ನು ಅವಲಂಬಿಸುವ ಮೂಲಕ ವಕೀಲರು, ಕ್ರಿಮಿನಲ್ ಪ್ರಕ್ರಿಯೆಗಳನ್ನು ರದ್ದುಪಡಿಸುವುದಕ್ಕೆ ಮತ್ತು ಉಚ್ಚ ನ್ಯಾಯಾಲಯವು ತನ್ನ ಚ ಅಧಿಕಾರವನ್ನು ಚಲಾಯಿಸುವುದಕ್ಕೆ ಹಾಗೂ ಪಕ್ಷಕಾರರ ನಡುವೆ ರಾಜಿ/ಇತ್ಯರ್ಥದ ಆಧಾರದ ಮೇಲೆ ವ್ಯವಹರಣೆಗಳನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ 482 ಮತ್ತು 320 ನೇ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳನ್ನು ಈ ತೀರ್ಪಿನಲ್ಲಿ ವಿಹಿತಗೊಳಿಸಲಾಗಿದೆ ಎಂದು ವಾದಿಸಿದ್ದಾರೆ.ಸದರಿ ತೀರ್ಪಿನಲ್ಲಿಯೂ ಸಹ, ಪ್ರಸುತ ಮೊಕದ್ದಮೆಯಲ್ಲಿ ಇರುವ ಅದೇ ರೀತಿಯ ಅಪರಾಧಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಭಾರತ ದಂಡ ಸಂಹಿತೆಯ 406, 420, 467, 471 ಮತ್ತು 35 ನೇ ಪ್ರಕರಣಗಳಿಗೆ ಸಂಬಂಧಿಸಿವೆ ಎಂಬುದನ್ನು ವಕೀಲರು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ಪರ್ಬತ್ ಭಾಯ್ ಆಹೀರ್ -ವಿರುದ್ಧ-ಗುಜರಾತ್ ರಾಜ್ಯ ಮತ್ತು ಗ್ಯಾನ್ ಸಿಂಗ್ -ವಿರುದ್ಧ-ಪಂಜಾಬ್ ರಾಜ್ಯ ಪ್ರಕರಣಗಳ ತೀರ್ಪನ್ನು ಉಲ್ಲೇಖಿಸಿ ವ್ಯವಹರಣೆಗಳನ್ನು ರದ್ದುಪಡಿಸುವಲ್ಲಿ, ಉಚ್ಚ ನ್ಯಾಯಾಲಯವು ತನ್ನ ವಿವೇಚನೆಯನ್ನು ಬಳಸಬೇಕಿತ್ತು ಎಂದು ತೀರ್ಮಾನಿಸಲಾಗಿದೆಯೇ?ಎಂಬುದಕ್ಕೆ 7 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ ಹಾಗೂ ಉಚ್ಚ ನ್ಯಾಯಾಲಯವು ಚ ತನ್ನ ಅಧಿಕಾರಗಳನ್ನು ಚಲಾಯಿಸುವಾಗ, ಅಪರಾಧ ನಿರ್ಣಯದ ಸಾಧ್ಯತೆಯು ಅತ್ಯಲ್ಪವಾಗಿದೆಯೇ ಅಥವಾ ನಿರಾಶಾದಾಯಕವಾಗಿದೆಯೇ?ಮತ್ತು ಕ್ರಿಮಿನಲ್ ಪ್ರಕರಣಗಳ ಮುಂದುವರಿಕೆಯಿಂದ ಆರೋಪಿಗೆ ಬಹು ದೊಡ್ಡ ತೊಂದರೆ ಮತ್ತು ಹಿಂಸೆಯನ್ನು ತಂದೊಡ್ಡುತ್ತದೆಯೇ?ಮತ್ತು ಕ್ರಿಮಿನಲ್ ಪ್ರಕರಣಗಳನ್ನು ರದ್ದುಪಡಿಸದೆ ಇರುವುದರಿಂದ ಅವನಿಗೆ ಪಕ್ಷಪಾತ ಹಾಗೂ ತೀವ್ರ ಅನ್ಯಾಯ ಉಂಟಾಗುತ್ತದೆಯೆ?ಎಂಬುದನ್ನು ಪರಿಶೀಲಿಸಬೇಕಿದೆ ಎಂದು ತೀರ್ಪಿನಲ್ಲಿ ಮಾಡಲಾದ ಚರ್ಚೆಯನ್ನೂ ಸಹ ನನ್ನ ಗಮನಕ್ಕೆ ತಂದಿದ್ದಾರೆ.ಅದಲ್ಲದೆ, ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಅದು ತನ್ನ ಅಧಿಕಾರವನ್ನು ಚಲಾಯಿಸಬೇಕೆ?ಅಥವಾ ಬೇಡವೇ?ಎಂದು ನಿರ್ಧರಿಸುವಾಗ ಇತ್ಯರ್ಥದ ಸಮಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.ಅಪರಾಧವನ್ನು ಎಸಗಿದ ನಂತರ ಕೂಡಲೇ ಇತ್ಯರ್ಥಕ್ಕೆ ಬರುವಂತಹ ಪ್ರಕರಣಗಳು ಮತ್ತು ಆ ವಿಷಯವು ಇನ್ನೂ ತನಿಖೆಯಲ್ಲಿದ್ದು, ಕ್ರಿಮಿನಲ್ ವ್ಯವಹರಣೆಗಳನ್ನು/ತನಿಖೆಯನ್ನು ರದ್ದುಪಡಿಸಲು ಇತ್ಯರ್ಥವನ್ನು ಸ್ವೀಕರಿಸುವಲ್ಲಿ ಉಚ್ಚ ನ್ಯಾಯಾಲಯವು ಉದಾರವಾಗಿರಬಹುದು.ಏಕೆಂದರೆ, ಈ ಹಂತದಲ್ಲಿ ಚ ತನಿಖೆಯು ಇನ್ನೂ ನಡೆಯುತ್ತಿದೆ ಮತ್ತು ಆರೋಪಪಟ್ಟಿಯನ್ನೂ ಸಹ ಸಲ್ಲಿಸಲಾಗಿಲ್ಲ.ಅಂತೆಯೇ, ಆರೋಪಗಳನ್ನು ರೂಪಿಸಿದ್ದರೂ, ಸಾಕ್ಷ್ಯಗಳನ್ನು ಇನ್ನೂ ಪ್ರಾರಂಭಿಸಿರದಿದ್ದರೆ ಅಥವಾ ಸಾಕ್ಷ್ಯಗಳು ಇನ್ನೂ ಶೈಶವಾವಸ್ಥೆಯಲ್ಲಿದ್ದರೆ, ಉಚ್ಚ ನ್ಯಾಯಾಲಯವು, ಚ ತನ್ನ ಅಧಿಕಾರಗಳನ್ನು ಅನುಕೂಲಕರವಾಗಿ ಚಲಾಯಿಸುವಲ್ಲಿ ಉದಾರತೆಯನ್ನು ತೋರಿಸಬಹುದು.ಆದರೆ, ಮೇಲೆ ತಿಳಿಸಿದ ಸಂದರ್ಭಗಳು/ಸಾಕ್ಷ್ಯಾಧಾರಗಳ ಮೇಲ್ನೋಟದ ನಿರ್ಧರಣೆ ನಂತರ ಮಾತ್ರ ಹಾಗೆ ಮಾಡಬಹುದು.ಇದಲ್ಲದೆ, ಅಂತಹ ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅಂತಿಮವಾಗಿ ಗುಣಾರ್ಹತೆಗಳ ಆಧಾರದ ಮೇಲೆ ಪ್ರಕರಣವನ್ನು ನಿರ್ಧರಿಸುವ ಸ್ಥಿತಿಯಲ್ಲಿರುವುದರಿಂದ ಮತ್ತು ಸಾಕ್ಷ್ಯವು ಬಹುತೇಕ ಪೂರ್ಣಗೊಂಡಾಗ ಮತ್ತು ಸಾಕ್ಷ್ಯಗಳ ಮುಕ್ತಾಯದ ನಂತರ ವಿಷಯವು ವಾದ ವಿವಾದಗಳ ಹಂತದಲ್ಲಿದ್ದಾಗ ಅದು ಮುಕ್ತಾಯಗೊಳ್ಳುವ ಸ್ಥಿತಿಯಲ್ಲಿರುವುದರಿಂದ, ಉಚ್ಚ ನ್ಯಾಯಾಲಯವು ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವುದರಿಂದ ತಡೆಯಬೇಕು ಎಂದೂ ಸಹ ಅಭಿಪ್ರಾಯಪಡಲಾಗಿದೆ.

13. ಇದಕ್ಕೆ ತದ್ವಿರುದ್ಧವಾಗಿ, 1 ನೇ ಪ್ರತ್ಯರ್ಜಿದಾರ-ಸಿಬಿಐ ಪರ ಹಾಜರಾದ ಮಾನ್ಯ ವಕೀಲರು, ತಮ್ಮ ವಾದಗಳಲ್ಲಿ ಅಪರಾಧಗಳು ಮಹಾರಾಷ್ಟ್ರ ರಾಜ್ಯ ವಿರುದ್ಧ— ವಿಕ್ರಂ ಅನಂತ್ ರಾಯ್ ದೋಶಿ ' ಪ್ರಕರಣದಲ್ಲಿ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವ, ತನಿಖಾ ಏಜೆನ್ಸಿಯಿಂದ ಆಪಾದಿಸಲಾದಂತಹ ರೀತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಹಣವನ್ನು ಪಡೆಯುವುದು ಹಣಕಾಸಿನ (ವಿತ್ತೀಯ) ಅಕ್ರಮವನ್ನು ಸ್ಪಷ್ಟವಾಗಿ ಬಹಿರಂಗಪಡಿಸಿದೆ ಮತ್ತು ಸ್ವಲ್ಪಮಟ್ಟಿಗೆ ಹಣಕಾಸಿನ ವಂಚನೆಯನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತದೆ ಮತ್ತು ಅದು ಸಮಾಜದ ದೃಷ್ಟಿಯಿಂದ ತಪ್ಪಾಗಿದ್ದು, ಅದು ಅಪಾರವಾದ ಸಾಮಾಜಿಕ ಪರಿಣಾಮವನ್ನು ಹೊಂದಿದ್ದು, ಸದರಿ ರದ್ದಿಯಾತಿಯು

4, 2015 ( 2) 237 (ಎಸ್ಸಿ)

ನ್ಯಾಯೋದ್ದೇಶಗಳನ್ನು ಕಾಪಾಡಲು ಸಹಾಯಕವಾಗಿಯೂ ಇರಲಿಲ್ಲ ಅಥವಾ ಅದು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನೂ ತಡೆಯದಿರುವುದರಿಂದ ಅದು ಕಾನೂನಾತ್ಮಕವಾಗಿ ಅಂಗೀಕಾರಾರ್ಹವಾಗಿಲ್ಲ ಎಂದು ಬಲವಾಗಿ ವಾದಿಸಿದ್ದಾರೆ.ವಕೀಲರು ಈ ತೀರ್ಪನ್ನು ಆಧಾರವಾಗಿ ತೆಗೆದುಕೊಂಡಿದ್ದು, ಅಪರಾಧವು ಸಂಘದ ವಿರುದ್ಧವೇ ಹೊರತು ವ್ಯಕ್ತಿಯ ವಿರುದ್ಧವಲ್ಲ ಎಂದು ತೀವ್ರವಾಗಿ ವಾದಿಸಿದ್ದಾರೆ ಮತ್ತು ಇದು ಹಣಕಾಸಿನ ವಂಚನೆಯಾಗಿದೆ ಮತ್ತು ಆರೋಪಪಟ್ಟಿಯಲ್ಲಿ ವಿವರಿಸಿರುವಂತೆ ಕಾರ್ಯರೀತಿಯನ್ನು ವ್ಯಕ್ತಿಗತ ಅಥವಾ ವೈಯಕ್ತಿಕ ತಪ್ಪಿನ ವಿಭಾಗದಲ್ಲಿ ಹಾಕಲಾಗುವುದಿಲ್ಲ ಎಂದು ವಾದಿಸಿ, ಸದರಿ ತೀರ್ಪಿನ 23 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ.ಆದ್ದರಿಂದ, ಆರೋಪಪಟ್ಟಿಯ ಯಾವುದೇ ರದ್ದಿಯಾತಿ ಸಾಧ್ಯವಿಲ್ಲ.

14. 1 ನೇ ಪ್ರತ್ಯರ್ಜಿದಾರನ ಪರ ವಕೀಲರು, ತಮ್ಮ ವಾದದಲ್ಲಿ, ತಮಿಳುನಾಡು ರಾಜ್ಯ -ವಿರುದ್ಧ-ಆರ್.ವಾಸಂತಿ ಸ್ಟ್ಯಾನ್ಲೆ ಮತ್ತು ಇನ್ನೊಬ್ಬರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೂ ಸಹ ಆಧಾರವನ್ನಾಗಿ ತೆಗೆದುಕೊಂಡಿದ್ದಾರೆ ಮತ್ತು ಈ ತೀರ್ಪಿನಲ್ಲಿ, ಗೌರವಾನ್ವಿತ ಸರ್ವೋಚ್ಚ ಚ ನ್ಯಾಯಾಲಯವು, ಸಿಆರ್‌ಪಿಸಿಯ 482 ನೇ ಪ್ರಕರಣಕ್ಕೆ ಸಂಬಂಧಿಸಿದಂತೆ, ಹಣಕಾಸು ವ್ಯವಸ್ಥೆಯ ದುರುಪಯೋಗವನ್ನು ಒಳಗೊಂಡ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸಿ, ವಿಷಯವನ್ನು ಪರಿಗಣಿಸಬೇಕು ಎಂದು ಅಭಿಪ್ರಾಯಪಟ್ಟಿದೆ.ಅಷ್ಟೇ ಅಲ್ಲದೆ, ರದ್ದುಪಡಿಸುವ ವಾದವನ್ನು ಆರ್ಥಿಕ ಅಪರಾಧಗಳಲ್ಲಿ ಪರಿಗಣಿಸುವುದೂ ಇಲ್ಲ ಅಥವಾ ಅಂಗೀಕರಿಸುವುದೂ ಇಲ್ಲ ಎಂದು ಅಭಿಪ್ರಾಯಪಟ್ಟಿದೆ.ಮುಂದುವರೆಸುತ್ತಾ, ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಮೇಲಿನ ಹೊಣೆಗೆ ಸಂಬಂಧಿಸಿದಂತೆ, ಇದು ತ್ವರಿತ ಅಧಿವಿಚಾರಣೆಯೊಂದಿಗೆ ಬೇರ್ಪಡಿಸಲಾಗದ ಸಂಬಂಧವನ್ನು ಹೊಂದಿದೆ.ಗಂಭೀರ ಕ್ರಿಮಿನಲ್ ಅಪರಾಧವನ್ನು ಅಥವಾ ಗಂಭೀರ ಆರ್ಥಿಕ ಅಪರಾಧವನ್ನು ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳ ಆರ್ಥಿಕ ಅಪರಾಧವನ್ನು ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳ ಆರ್ಥಿಕ ಸುಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭಾವ್ಯತೆ ಇರುವ ಅಪರಾಧವನ್ನು, ಅಧಿವಿಚಾರಣೆಯಲ್ಲಿ ವಿಳಂಬವಾಗಿದೆ ಎಂಬ ಕಾರಣಕ್ಕಾಗಿ ಅಥವಾ ವಿಷಯವನ್ನು ಇತ್ಯರ್ಥಪಡಿಸುವಾಗ ವ್ಯವಸ್ಥೆಯ ಮೇಲೆ ಬೀಳುವ ಹೊಣೆಯನ್ನು ತಪ್ಪಿಸಲು, ಅದನ್ನು ರದ್ದುಗೊಳಿಸಬೇಕು ಎಂಬ ನಿಯಮದ ಆಧಾರದ ಮೇಲೆ ಅದನ್ನು ರದ್ದುಗೊಳಿಸಬೇಕು ಎಂಬ ಕಾರಣದ ಮೇಲೆ ರದ್ದು ಪಡಿಸಬಾರದು.ಅದು ಎಂದಿಗೂ ಸ್ವೀಕಾರಾರ್ಹ ನಿಯಮ ಅಥವಾ ಮಾನದಂಡವಾಗಲಾರದು.ಏಕೆಂದರೆ, ಅದು ಕಾನೂನು ಮತ್ತು ಸುವ್ಯವಸ್ಥೆಯ ಮೂಲ ಘಟಕಗಳನ್ನು ನಾಶಪಡಿಸುವುದಕ್ಕೆ ಸಮಾನವಾಗುತ್ತದೆ ಮತ್ತು

ನೀತಿನಿಷ್ಠೆಗಳಿಲ್ಲದ ಶಾಸನಗಳ ಮಜ್ಜೆಯನ್ನು ಮತ್ತಷ್ಟು ಬಲಪಡಿಸುತ್ತದೆ.ಈ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ಚ ನ್ಯಾಯಾಲಯವು ಗಂಭೀರ ಅಪರಾಧವನ್ನು ಅಥವಾ ಗಂಭೀರ ಆರ್ಥಿಕ ಅಪರಾಧವನ್ನು ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ, ಸಂಸ್ಥೆಗಳ ಆರ್ಥಿಕ ಸುಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭಾವ್ಯತೆ ಇರುವ ಅಪರಾಧವನ್ನು, ಅಧಿವಿಚಾರಣೆಯಲ್ಲಿ ವಿಳಂಬವಾಗಿದೆ ಎಂಬ ಕಾರಣಕ್ಕಾಗಿ ಅಥವಾ ವಿಷಯವನ್ನು ಇತ್ಯರ್ಥಪಡಿಸಿದಾಗ, ವ್ಯವಸ್ಥೆಯ ಮೇಲಿನ ಹೊರೆಯನ್ನು ತಪ್ಪಿಸಲು ಅದನ್ನು ರದ್ದುಗೊಳಿಸಬೇಕು ಎಂಬ ನಿಯಮದ ಆಧಾರದ ಮೇಲೆ ಅದನ್ನು ರದ್ದುಗೊಳಿಸಬೇಕು ಎಂಬ ಕಾರಣಕ್ಕಾಗಿ ಅದನ್ನು ರದ್ದುಗೊಳಿಸಬಾರದು ಎಂಬ ನಿರ್ಣಯಕ್ಕೆ ಬರುತ್ತದೆ.ಅದು ಎಂದಿಗೂ ಸ್ವೀಕಾರಾರ್ಹ ನಿಯಮ ಅಥವಾ ಮಾನದಂಡವಾಗಲಾರದು.ಏಕೆಂದರೆ, ಅದು ಕಾನೂನು ಮತ್ತು ಸುವ್ಯವಸ್ಥೆಯ ಮೂಲ ಘಟಕಗಳನ್ನು ನಾಶಪಡಿಸುವುದಕ್ಕೆ ಸಮಾನವಾಗುತ್ತದೆ.ವಕೀಲರು ಈ ತೀರ್ಪನ್ನು ಆಧಾರವಾಗಿ ತೆಗೆದುಕೊಂಡಿದ್ದು, ಪ್ರಸ್ತುತ ಪ್ರಕರಣವೂ ಸಹ ವಂಚನೆಯ ಕೃತ್ಯವಲ್ಲದೆ ಬೇರೇನಲ್ಲ.ಇದು ಹಣಕಾಸಿನ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ನಷ್ಟವನ್ನು ಉಂಟುಮಾಡುತ್ತದೆ ಹಾಗೂ ಯಾವುದೇ ಕಾನೂನು ವ್ಯವಹರಣೆಯನ್ನು ರದ್ದುಗೊಳಿಸಲಾಗುವುದಿಲ್ಲವೆಂದು ವಾದಿಸುತ್ತಾರೆ.

166 15. ಪರ್ಬತ್ಭಾಯ್ ಆಹಿರ್ ಮತ್ತು ಇತರರು -ವಿರುದ್ಧ-ಗುಜರಾತ್ ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೂ ಸಹ ವಕೀಲರು ಅವಲಂಬಿಸಿದ್ದಾರೆ ಮತ್ತು ಭಾರತ ದಂಡ ಸಂಹಿತೆಯ 384, 467, 468, 471, 120 ಬಿ ಮತ್ತು 506 ( 2) ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಥಮ ಮಾಹಿತಿ ವರದಿಯನ್ನು ರದ್ದುಗೊಳಿಸಿ, ಉಚ್ಚ ನ್ಯಾಯಾಲಯವು ಸರಿಯಾಗಿಯೇ ಅರ್ಜಿಯನ್ನು ವಜಾ ಚ ಮಾಡಿದೆ ಮತ್ತು ಅಷ್ಟೇ ಅಲ್ಲದೆ, ಉಚ್ಚ ನ್ಯಾಯಾಲಯವು ತನ್ನ ಅಂತರ್ನಿಹಿತ ನ್ಯಾಯವ್ಯಾಪ್ತಿಯನ್ನು ಚಲಾಯಿಸಿ, ಪ್ರಥಮ ಮಾಹಿತಿ ವರದಿಯನ್ನು ರದ್ದುಗೊಳಿಸುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸುವುದು ಸಮರ್ಥಿತವಾಗಿತ್ತೆಂದು ಈ ತೀರ್ಪಿನಲ್ಲಿ ಅಭಿಪ್ರಾಯಪಡಲಾಗಿದೆ.ಉಚ್ಚ ಚ ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸುವಾಗ ಎರಡು ಮಹತ್ವದ ಸಂದರ್ಭಗಳನ್ನು ಪ್ರಸ್ತಾವಿಸಿದೆ ಮತ್ತು ಎಲ್ಲಾ ಅಪೀಲುದಾರರು ಒಂದು ತಂಡವಾಗಿ ಎಸಗಿರುವ ಸುಲಿಗೆ, ಖೋಟಾ ಸಹಿ ಮತ್ತು ಪಿತೂರಿಯನ್ನೊಳಗೊಂಡ ಪ್ರಕರಣದಲ್ಲಿ, 0 ದೂರುದಾರರೊಂದಿಗೆ ರಾಜಿ ಮಾಡಿಕೊಳ್ಳಲಾಯಿತು ಎಂಬ ಕಾರಣಕ್ಕೆ ಪ್ರಥಮ ಮಾಹಿತಿ ವರದಿಯನ್ನು ರದ್ದುಪಡಿಸುವುದು ಸಮಾಜದ ಹಿತದೃಷ್ಟಿಯಲ್ಲಿ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದೆ.ಅಂತಹ ಅಪರಾಧಗಳನ್ನು ಕೇವಲ ಖಾಸಗಿ ಅಥವಾ ಸಿವಿಲ್ ವಿವಾದಗಳೆಂದು ಭಾವಿಸಲು ಸಾಧ್ಯವಿಲ್ಲವಾದರೂ, ಗಂಭೀರ ಅಪರಾಧವನ್ನು ವಿಚಾರಣೆಗೆ ಒಳಪಡಿಸುವ ಸಾಮಾಜಿಕ ಹಿತಾಸಕ್ತಿಯನ್ನು ಸೂಚಿಸುತ್ತದೆ.ಈ ತೀರ್ಪನ್ನು ಅವಲಂಬಿಸುವುದರ ಮೂಲಕ, ಅದು ಸಮಾಜದ ಮೇಲೆ ಹೆಚ್ಚು ಚ ಪ್ರತಿಕೂಲ ಪರಿಣಾಮವನ್ನುಂಟುಮಾಡುತ್ತದೆಯೇ ಹೊರತು ಒಬ್ಬ ವ್ಯಕ್ತಿಯ ಮೇಲ ಎಂದು ವಕೀಲರು ವಾದಿಸಿದ್ದಾರೆ ಮತ್ತು ಇದು ಎಲ್ಲಾ ಅಪೀಲುದಾರರು ಒಂದು ತಂಡವಾಗಿ ಎಸಗಿರುವ ಸುಲಿಗೆ, ಖೋಟಾ ಸಹಿ ಮತ್ತು ಪಿತೂರಿಯನ್ನೊಳಗೊಂಡಿದ್ದಲ್ಲಿ, ನಡಾವಳಿಗಳನ್ನು ರದ್ದುಗೊಳಿಸುವುದು ಸಮಾಜದ ಹಿತದೃಷ್ಟಿಯಿಂದ ಸೂಕ್ತವಲ್ಲ ಮತ್ತು ಆದ್ದರಿಂದ, ಯಾವುದೇ ವ್ಯವಹರಣೆಗಳನ್ನು ರದ್ದುಗೊಳಿಸಲಾಗುವುದಿಲ್ಲ ಎಂದು ತೀರ್ಪಿನಲ್ಲಿ ಇದನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ.

16. ಅರ್ಜಿದಾರನ ಪರ ವಕೀಲರ ಹಾಗೆಯೇ 1 ನೇ ಪ್ರತ್ಯರ್ಜಿದಾರನ ಪರ ವಕೀಲರ ವಾದಗಳನ್ನು ಆಲಿಸಲಾಗಿದೆ ಮತ್ತು 2 ನೇ ಪ್ರತ್ಯರ್ಜಿದಾರನು ರಿಟ್ ಅರ್ಜಿಸಂಖ್ಯೆ: 66631/2012 ರಲ್ಲಿ ವಕೀಲರ ಮುಖಾಂತರ ಪ್ರತಿನಿಧಿಸಿದ್ದರೂ, ವಾದವನ್ನು ಮಾಡಲು ಇಚ್ಛಿಸಿರುವುದಿಲ್ಲ ಮತ್ತು ಯಾವುದೇ ಆಕ್ಷೇಪಣೆಗಳನ್ನೂ ಸಹ ಸಲ್ಲಿಸಿರುವುದಿಲ್ಲ ಮತ್ತು ಅರ್ಜಿದಾರನ ಮತ್ತು 1 ನೇ ಪ್ರತ್ಯರ್ಜಿದಾರನ ವಾದವನ್ನು ಪರಿಗಣಿಸಿ, ಈ ನ್ಯಾಯಾಲಯವು, ಅವರು ಕೋರಿರುವಂತೆ ವ್ಯವಹರಣೆಗಳನ್ನು ರದ್ದುಪಡಿಸಲು ಸಿಆರ್‌ಪಿಸಿ'ಯ 482 ನೇ ಪ್ರಕರಣವನ್ನು ಅನ್ವಯಿಸಬಹುದೇ?ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

17. ಅರ್ಜಿದಾರರ ಹಾಗೂ 1 ನೇ ಪ್ರತ್ಯರ್ಜಿದಾರರ ವಾದಗಳನ್ನು ಆಲಿಸಲಾಗಿದೆ ಮತ್ತು ಎರಡೂ ಪ್ರಕರಣಗಳ ವಾಸ್ತವಿಕ ಅಂಶಗಳನ್ನು ಪರಿಗಣಿಸಿ, ಮೊದಲನೇ ಅರ್ಜಿಯಲ್ಲಿ 2 ನೇ ಪ್ರತ್ಯರ್ಜಿದಾರರಾದ ಕೆನರಾ ಬ್ಯಾಂಕಿನ ಸೂಚನೆಯ ಮೇರೆಗೆ ದೂರುಗಳನ್ನು ದಾಖಲಿಸಲಾಗಿದೆ ಮತ್ತು ಸದರಿ ದೂರುಗಳಲ್ಲಿ ಅರ್ಜಿದಾರನು ಬ್ಯಾಂಕಿನ ಪರವಾಗಿ, ದಾಸ್ತಾನನ್ನು ಅಡಮಾನ ಇಡಲಾಗಿದ್ದರೂ ಸಹ, ಅವನು ದಾಸ್ತಾನನ್ನು ತೆಗೆದು ಅದನ್ನು ಮಾರಾಟ ಮಾಡಿದ್ದಾರೆ ಎಂದು ಆಪಾದಿಸಲಾಗಿದೆ ಮತ್ತು ಎರಡನೇ ಅರ್ಜಿಯಲ್ಲಿ ಕೆನರಾ ಬ್ಯಾಂಕಿನ ಪರವಾಗಿ ದಾಸ್ತಾನನ್ನು ಅಡಮಾನ ಮಾಡಲಾಗಿದ್ದರೂ, ಅದನ್ನು ಅರ್ಜಿದಾರರು ಮುಚ್ಚಿ ಹಾಕಿ 2 ನೇ ಪ್ರತ್ಯರ್ಜಿದಾರರನ್ನು ಸಂಪರ್ಕಿಸಿ, ಯಾವುದೇ ಬ್ಯಾಂಕಿನ ಪರವಾಗಿ ಯಾವುದೇ ಅಡಮಾನ ಇರಲಿಲ್ಲವೆಂದು ಸುಳ್ಳು ಹೇಳಿ, ಸಾಲವನ್ನು ಪಡೆದಿರುತ್ತಾನೆ ಹಾಗೂ ದಾಸ್ತಾನನ್ನು ಸಹ ತೆಗೆದು ಮಾರಿ ಎರಡೂ ಬ್ಯಾಂಕುಗಳಿಗೆ ವಂಚನೆ ಎಸಗಿರುತ್ತಾನೆ ಎಂಬುದು ಎರಡನೇ ಪ್ರತಿವಾದಿಯ ಮೊಕದ್ದಮೆಯಾಗಿದೆ.ದೂರಿನ ಆಧಾರದ ಮೇಲೆ, 1 ನೇ ಪ್ರತ್ಯರ್ಜಿದಾರ-ಸಿಬಿಐ ತನಿಖೆಯನ್ನು ನಡೆಸಿ, ಸಾಕ್ಷ್ಯಾಧಾರಗಳನ್ನು ಹುಡುಕಿ, ಆರೋಪ ಪಟ್ಟಿಯನ್ನು ಸಲ್ಲಿಸಿದೆ.

18. ಈ ಎರಡೂ ಅರ್ಜಿಗಳನ್ನು ಸಲ್ಲಿಸುವ ಸಮಯದಲ್ಲಿ, ರಿಟ್ ಅರ್ಜಿಸಂಖ್ಯೆ: 66631/2012 ಕ್ಕೆ ಸಂಬಂಧಿಸಿದಂತೆ, 2 ನೇ ಪ್ರತ್ಯರ್ಜಿದಾರ-ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪರವಾಗಿ ಒಪ್ಪಂದವಿತ್ತು ಎಂಬುದನ್ನು ಗಮನಿಸಬೇಕು ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಾಖಲೆಗಳುದಿನಾಂಕ: 30.12.2011 ರಂದು ಅವರ ನಡುವೆ ಒಂದು ಬಾರಿಯ ತೀರುವಳಿ ಒಪ್ಪಂದಪತ್ರ ಮಾಡಿಕೊಳ್ಳಲಾಗಿತ್ತು ಎಂದು ತೋರಿಸಿರುತ್ತವೆ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ರೂ .17,19,11,526/-ಕ್ಕೆ ಬದಲಾಗಿ ರೂ .11,20,00,000/ವನ್ನು ಸ್ವೀಕರಿಸಿ, ತೀರುವಳಿ ಪ್ರಮಾಣಪತ್ರವನ್ನು ನೀಡಿದೆ ಹಾಗೂ ಅರ್ಜಿದಾರರನ್ನು ಹೊಣೆಗಾರಿಕೆಗಳಿಂದ ಮುಕ್ತಗೊಳಿಸಿದೆ.ಕೆನರಾ ಬ್ಯಾಂಕಿಗೆ ಸಂಬಂಧಿಸಿದಂತೆ ಎಂದರೆ, ಒಂದನೇ ಅರ್ಜಿಗೆ ಸಂಬಂಧಪಟ್ಟಂತೆ ಅರ್ಜಿದಾರರು ಹಾಜರುಪಡಿಸಿದ ಇತರ ದಾಖಲೆ ಪತ್ರವು 26.03.2013 ರ ದಿನಾಂಕದ್ದಾಗಿದೆ ಮತ್ತು ಒಂದು ಬಾರಿಯ ತೀರುವಳಿ (ಒಟಿಎಸ್) ಸ್ಕೀಂನ ಅಡಿಯಲ್ಲಿ ಹಣವನ್ನು ಸ್ವೀಕರಿಸಿ, ಅರ್ಜಿದಾರರ ಎರಡು ಸಾಲದ ಖಾತೆಗಳನ್ನು ಸಹ ಮುಚ್ಚಿದೆ ಮತ್ತು ಪಕ್ಷಕಾರರ ನಡುವೆ ಎಂದರೆ, ಎರಡನೇ ಪ್ರತ್ಯರ್ಜಿದಾರರೊಂದಿಗಿನ ಇತ್ಯರ್ಥದ ಸಂಗತಿಯು ಮತ್ತು ಅವರಿಂದ ಅರ್ಜಿದಾರರು ಹಣಕಾಸು ಸೌಲಭ್ಯವನ್ನು ಪಡೆದಿದ್ದಾರೆ ಎಂಬುದು ವಿವಾದವಾಗಿಲ್ಲ ಮತ್ತು ಅದಕ್ಕಿಂತ ಹೆಚ್ಚಾಗಿ, ಆಯಾ ಬ್ಯಾಂಕುಗಳೂ ಸಹ ಈ ಅರ್ಜಿಯನ್ನು ವಿರೋಧಿಸಿಲ್ಲ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ವಕೀಲರನ್ನು ನಿಯೋಜಿಸಿಕೊಂಡಿದ್ದರೂ, ಅವರು ಈ ವಿಷಯದಲ್ಲಿ ವಾದಿಸಲು ಅಪೇಕ್ಷಿಸಿರಲಿಲ್ಲ ಎಂಬುದನ್ನು ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ ಮತ್ತು 1 ನೇ ಪ್ರತ್ಯರ್ಜಿದಾರರು ಮಾತ್ರ ತನಿಖೆಯನ್ನು ನಡೆಸಬೇಕಿದ್ದು, ಅದು ಆರೋಪಪಟ್ಟಿಯನ್ನು ರದ್ದುಗೊಳಿಸುವುದನ್ನು ವಿರೋಧಿಸುತ್ತಿದೆ.

19. ಮೇಲೆ ತಿಳಿಸಲಾದ ತೀರ್ಪುಗಳಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಇದು ಸಮಾಜದ ಮೇಲೆ ಹೆಚ್ಚಿನ ಪರಿಣಾಮ ಬೀರಿದರೆ, ಅದರಲ್ಲೂ ನಿರ್ದಿಷ್ಟವಾಗಿ ಸುಲಿಗೆ, ಖೋಟಾ ಸಹಿ ಮತ್ತು ಪಿತೂರಿಗಳಿಗೆ ಸಂಬಂಧಿಸಿದ ಅಪರಾಧಗಳಲ್ಲಿ ವ್ಯವಹರಣೆಗಳನ್ನು ರದ್ದು ಮಾಡಲು ಸಾಧ್ಯವಿಲ್ಲ ಮತ್ತು ಆ ಕೃತ್ಯಗಳು ಸಮಾಜದ ಹಿತದೃಷ್ಟಿಯಿಂದ ಮಾಡಿದವುಗಳಲ್ಲ.ಹಾಗಾಗಿ, ಯಾವುದೇ ರೀತಿಯ ವ್ಯವಹರಣೆಗಳನ್ನು ರದ್ದುಗೊಳಿಸಲು ಸಾಧ್ಯವಿಲ್ಲ ಮತ್ತು ಇದನ್ನು 1 ನೇ ಪ್ರತ್ಯರ್ಜಿದಾರರು ಅದನ್ನು ಆಧಾರವನ್ನಾಗಿ ತೆಗೆದುಕೊಂಡಿರುವ ಪರ್ಬತ್ ಭಾಯ್ ಆಶಿರ್ ಪ್ರಕರಣದ (ಮೇಲೆ ಹೇಳಿದ) ತೀರ್ಪಿನಲ್ಲಿ ಚರ್ಚಿಸಲಾಗಿದ್ದು ಮತ್ತು ಅನಿತಾ ಮರಿಯಾ ಡಯಾಸ್ ಮತ್ತು ಇನ್ನೊಬ್ಬರು-ವಿರುದ್ಧ-ಮಹಾರಾಷ್ಟ್ರ ರಾಜ್ಯ ಮತ್ತು ಇನ್ನೊಬ್ಬರು ಪ್ರಕರಣದ ತೀರ್ಪಿನಲ್ಲಿ ಸಹ ಚರ್ಚಿಸಲಾಗಿದೆ ಮತ್ತು ಪಕ್ಷಕಾರರ ನಡುವಿನ ಒಪ್ಪಂದದ ರಾಜಿಯ ಆಧಾರದ ಮೇಲೆ ವ್ಯವಹರಣೆಯನ್ನು ರದ್ದುಗೊಳಿಸಲು ಮಾರ್ಗಸೂಚಿಗಳನ್ನು ಸಹ ವಿಧಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿದೆ.ಈ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಅಪರಾಧ ಸಾಬೀತಾಗುವ ಸಾಧ್ಯತೆಯು ಅತ್ಯಲ್ಪವಾಗಿದೆಯೇ?ಮತ್ತು ನಿರಾಶಾದಾಯಕವಾಗಿದೆಯೇ?ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಮುಂದುವರೆಸುವುದರಿಂದ ಆರೋಪಿಗೆ ತೊಂದರೆ ಮತ್ತು ಹಿಂಸೆ ಉಂಟಾಗುತ್ತದೆಯೇ?ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ರದ್ದುಪಡಿಸದೆ ಇರುವುದರಿಂದ ಅವನಿಗೆ ತೀವ್ರ ಅನ್ಯಾಯ ಉಂಟಾಗುತ್ತದೆಯೇ?ಎಂಬುದನ್ನು ಉಚ್ಚ ನ್ಯಾಯಾಲಯವು ಪರಿಶೀಲಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದೆ.ಅದೇ ಸಮಯದಲ್ಲಿ, ನ್ಯಾಯಾಲಯವು, ಇದು ಆರಂಭಿಕ ಹಂತದಲ್ಲಿದೆಯೇ?ಎಂದರೆ, ತನಿಖೆಯ ಅವಧಿಯಲ್ಲಿದೆಯೇ?ಅಥವಾ ಯಾವುದೇ ಆರೋಪಪಟ್ಟಿಯನ್ನು ಸಲ್ಲಿಸಲಾಗಿದ್ದರೆ, ಮತ್ತು ಅಧಿವಿಚಾರಣೆಯನ್ನು ಪ್ರಾರಂಭಿಸಲಾಗಿದೆಯೇ?ಇದು ವಾದಗಳನ್ನು ಕೇಳುವ ಹಂತದಲ್ಲಿದೆಯೇ?ಎಂಬುದನ್ನು ಪರಿಶೀಲಿಸಬೇಕಿದೆ ಎಂದೂ ಸಹ ತೀರ್ಮಾನಿಸಲಾಗಿದೆ ಮತ್ತು ಈ ತೀರ್ಪಿನಲ್ಲಿ ಇದು ಆರೋಪಪಟ್ಟಿಯನ್ನು ತಯಾರು ಮಾಡುವ ಹಂತದಲ್ಲಿದ್ದು, ಆದರೆ ಸಾಕ್ಷ್ಯವನ್ನು ಇನ್ನೂ ಪ್ರಾರಂಭಿಸಿರದಿದ್ದರೆ ಅಥವಾ ಸಾಕ್ಷ್ಯಗಳು ಇನ್ನೂ ಶೈಶವಾವಸ್ಥೆಯಲ್ಲಿದ್ದರೆ, ಉಚ್ಚ ನ್ಯಾಯಾಲಯವು ತನ್ನ ಅಧಿಕಾರಗಳನ್ನು ಚಲಾಯಿಸಲು ಉದಾರತೆಯನ್ನು ಚ ತೋರಬಹುದು.ಆದರೆ, ಅದನ್ನು ಮೇಲೆ ಉಲ್ಲೇಖಿಸಿದ ಸಂದರ್ಭಗಳು/ಸಾಕ್ಷ್ಯಾಧಾರಗಳ ಮೇಲ್ನೋಟದ ಮೌಲ್ಯ ನಿರ್ಧರಣೆಯ ನಂತರ ಹಾಗೆ ಮಾಡಬಹುದು ಎಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ.ವ್ಯವಹರಣೆಗಳು ಇನ್ನೂ ಆರಂಭಿಕವಾದ

7. (2018) 3 ಎಸ್ಸಿಸಿ 290

ಮತ್ತು ರೂಪುಗೊಳ್ಳುತ್ತಿರುವ ಹಂತದಲ್ಲಿದ್ದಲ್ಲಿ, ಉಚ್ಚ ನ್ಯಾಯಾಲಯವು, ಪರ್ಬತ್ ಚ ಭಾಯ್ ಆಹಿರ್ನ ಪ್ರಕರಣದ ತೀರ್ಪನ್ನು ಉಲ್ಲೇಖಿಸುವ ಮೂಲಕ ವ್ಯವಹರಣೆಗಳನ್ನು ರದ್ದುಪಡಿಸುವಲ್ಲಿ ತನ್ನ ವಿವೇಚನೆಯನ್ನು ಚಲಾಯಿಸಬೇಕಾಗಿತ್ತು ಎಂದು ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟು ಮಾರ್ಗಸೂಚಿಗಳನ್ನು ವಿಧಿಸಿದೆ.

20. ಪ್ರಸ್ತುತ ಪ್ರಕರಣದಲ್ಲಿಯೂ ಸಹ ಅದೇ ರೀತಿಯಲ್ಲಿ ಅರ್ಜಿದಾರರ ವಿರುದ್ಧ ಸಂಜ್ಞಾನವನ್ನು ತೆಗೆದುಕೊಂಡ ನಂತರ, ಅರ್ಜಿದಾರನು ಈ ನ್ಯಾಯಾಲಯಕ್ಕೆ ಬಂದಿದ್ದಾರೆ ಮತ್ತು ಈ ನ್ಯಾಯಾಲಯವು ಮುಂದಿನ ಆದೇಶಗಳವರೆಗೆ ತಡೆ ನೀಡಿದ್ದು, ಅಧಿವಿಚಾರಣೆಯನ್ನು ಪ್ರಾರಂಭಿಸಿಲ್ಲ ಮತ್ತು ಅದು ಆರಂಭಿಕ ಹಂತದಲ್ಲಿದೆಯೆಂಬುದನ್ನು ಗಮನಿಸಬೇಕಿದೆ ಮತ್ತು ಪಕ್ಷಕಾರರ ನಡುವಿನ ವಿಷಯವು ಇತ್ಯರ್ಥವಾಗಿದೆ ಮತ್ತು

ಅದೇ ಹಣಕಾಸು ಸಂಸ್ಥೆಗಳು ವಿಷಯವನ್ನು ಇತ್ಯರ್ಥಗೊಳಿಸಲು ಮುಂದೆ ಬಂದವು ಮತ್ತು ಒಂದು ಬಾರಿಯ ತೀರುವಳಿ ಪತ್ರವನ್ನು ಹಾಗೂ ಬಾಕಿ ಚುಕ್ತಾ ಪ್ರಮಾಣಪತ್ರವನ್ನು ನೀಡಿದವು ಹಾಗೂ ಏಜೆನ್ಸಿಯನ್ನು ಹೊರತುಪಡಿಸಿ, ಹಣಕಾಸು ಸಂಸ್ಥೆಯು ವಾದವನ್ನು ಮಾಡಲು ಮುಂದೆ ಬರುತ್ತಿಲ್ಲ ಎಂಬುದನ್ನು ಗಮನಿಸಬೇಕಿದೆ.ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಈ ಚ ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿಯೂ ಸಹ, ಪ್ರಸ್ತುತ ಅರ್ಜಿಗಳಲ್ಲಿ ಅರ್ಜಿದಾರನ ವಿರುದ್ಧದ ಅನ್ವಯಿಸಲಾದ ಅಪರಾಧದಂತೆ, ಭಾರತ ದಂಡ ಸಂಹಿತೆಯ 406, 467, 471 ಮತ್ತು 34 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೂ ಸಹ ಉಚ್ಚ ನ್ಯಾಯಾಲಯವು, ಅಪರಾಧ ಸಾಬೀತಾಗುವ ಸಾಧ್ಯತೆಯು ಚ ಅತ್ಯಲ್ಪವಾಗಿದೆಯೇ?ಮತ್ತು ನಿರಾಶಾದಾಯಕವಾಗಿದೆಯೇ?ಎಂಬುದನ್ನು ಪರಿಶೀಲಿಸಬೇಕಾಗಿದೆ ಎಂದು ಅನಿತಾ ಮರಿಯಾ ದಿಯಾಸ್ ಪ್ರಕರಣದಲ್ಲಿನ ಇತ್ತೀಚಿನ ತೀರ್ಪಿನಲ್ಲಿ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ ಮತ್ತು ಪ್ರಸ್ತುತ ಪ್ರಕರಣದಲ್ಲಿಯೂ ಸಹ, ದೂರುದಾರರು ಸ್ವತಃ ತಾವೇ ಪ್ರಕರಣದ ಇತ್ಯರ್ಥಕ್ಕಾಗಿ ಮುಂದೆ ಬಂದು ವಿವಾದವನ್ನು ಬಗೆಹರಿಸಿದಾಗ, ಅಡಮಾನ ಇಡಲಾಗಿದ್ದ ದಾಸ್ತಾನನ್ನು ತೆಗೆದುಕೊಂಡು, ಅದನ್ನು ಮಾರಾಟ ಮಾಡಿದ್ದಾರೆಂದು ಮತ್ತು ಅದೇ ದಾಸ್ತಾನನ್ನು ಅದಕ್ಕಿಂತ ಮೊದಲಿನ ಬ್ಯಾಂಕಿಗೆ ಅಡಮಾನ ಮಾಡಿದ್ದನ್ನು ಮುಚ್ಚಿಟ್ಟು, ತರುವಾಯದ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದಾರೆ ಎಂಬುದು ಆಪಾದನೆಯಾಗಿದೆ ಮತ್ತು ಅರ್ಜಿದಾರನ ಹಾಗೂ ಹಣಕಾಸು ಸಂಸ್ಥೆಗಳ ನಡುವೆ ಈ ವ್ಯವಹಾರಗಳು ನಡೆದಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ತನ್ನ ಇತ್ತೀಚಿನ ತೀರ್ಪಿನಲ್ಲಿ ಪ್ರಕರಣದ ಹಂತಕ್ಕೆ ಸಂಬಂಧಿಸಿದಂತೆ, ಅದು ಅಪರಾಧ ಸಾಬೀತಾಗುವುದರಲ್ಲಿ ಕೊನೆಗೊಳ್ಳುತ್ತದೆಯೇ?ಮತ್ತು ಅದರ ಸಾಧ್ಯತೆ ಅತ್ಯಲ್ಪವಾಗಿದೆಯೇ?ಅಥವಾ ನಿರಾಶಾದಾಯಕವಾಗಿದೆಯೇ?ಎಂಬುದಕ್ಕೆ ಸಂಬಂಧಿಸಿದಂತೆ ಚರ್ಚಿಸಿದೆ ಮತ್ತು ಪ್ರಸ್ತುತ ಪ್ರಕರಣದಲ್ಲಿ ಸಹ ದೂರುದಾರರು ಸ್ವತಃ ತಾವೇ ಈ ವಿಷಯದಲ್ಲಿ ರಾಜಿ ಮಾಡಿಕೊಂಡಾಗ ಮತ್ತು ಪ್ರಾಸಿಕ್ಯೂಟಿಂಗ್ ಏಜೆನ್ಸಿಯು ದೂರುದಾರರಾಗಿದ್ದಾಗ ಮತ್ತು ಅವರು ಬಾಕಿ ಹಣವನ್ನು ಸ್ವೀಕರಿಸುವ ಮೂಲಕ ವಿಷಯವನ್ನು ಇತ್ಯರ್ಥಪಡಿಸಿದಾಗ, ಮತ್ತು ಬ್ಯಾಂಕಿನ ಪರವಾಗಿ ಭದ್ರತೆಯನ್ನು ನೀಡುವ ಉದ್ದೇಶವೇ ಸಾಲಗಾರರಿಂದ ಮೊತ್ತವನ್ನು ವಸೂಲಿ ಮಾಡುವುದು ಮತ್ತು ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರಿಂದ ಮೊತ್ತವನ್ನು ವಸೂಲಿ ಮಾಡುವ ಮೂಲಕ ವಾಸ್ತವವಾಗಿ ಈಗಾಗಲೇ ಅದರ ಗುರಿ ಮತ್ತು ಉದ್ದೇಶವನ್ನು ಈಡೇರಿಸಲಾಗಿದೆ ಮತ್ತು ಹಣಕಾಸು ಸಂಸ್ಥೆಗಳ ಪರವಾಗಿ ಇದ್ದ ಬಾಕಿ ಮೊತ್ತವನ್ನು ವಸೂಲಿ ಮಾಡಲಾಗಿದೆ ಮತ್ತು ಆದ್ದರಿಂದ, ' ಸಿಆರ್‌ಪಿಸಿ ಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಲು ಅರ್ಹವಾದ ಮೊಕದ್ದಮೆ ಇದಾಗಿದೆ ಮತ್ತು ಅರ್ಜಿದಾರನ ವಿರುದ್ಧ ವ್ಯವಹರಣೆಗಳನ್ನು ಮುಂದುವರೆಸುವುದರಲ್ಲಿ ಯಾವುದೇ ಅರ್ಥವಿಲ್ಲ ಮತ್ತು ಅದು ಇನ್ನೂ ಆರಂಭಿಕ ಹಂತದಲ್ಲೇ ಇದ್ದು, ಯಾವುದೇ ಅಧಿವಿಚಾರಣೆಯನ್ನು ಪ್ರಾರಂಭಿಸಿಲ್ಲ ಮತ್ತು ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡರೂ ಸಹ, ಈ ದೂರುದಾರರು ಸ್ವತಃ ತಾವೇ ಈ ವಿಷಯವನ್ನು ಒತ್ತಿ ಹೇಳುತ್ತಿಲ್ಲ ಹಾಗೂ ಈ ವಿಷಯವನ್ನು ವಾದಿಸುತ್ತಿಲ್ಲದಿರುವುದರಿಂದ ಅಪರಾಧ ರುಜುವಾತಾಗುವ ಸಂಭವವಿಲ್ಲ ಮತ್ತು ಕ್ರಿಮಿನಲ್ ವ್ಯವಹರಣೆಗಳನ್ನು ಮುಂದುವರೆಸಿದರೆ, ಗ್ಯಾನ್ ಸಿಂಗ್ ಪ್ರಕರಣದಲ್ಲಿ (ಮೇಲೆ ಹೇಳಿದ) ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಅದೊಂದು ವ್ಯರ್ಥ ಪ್ರಯತ್ನವಾಗಿರುತ್ತದೆ ಮತ್ತು ಗ್ಯಾನ್ ಸಿಂಗ್ ಪ್ರಕರಣದಲ್ಲಿ ಸಹ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ಸಿವಿಲ್, ವಾಣಿಜ್ಯ, ವ್ಯಾಪಾರ, ಹಣಕಾಸು, ಪಾಲುದಾರಿಕೆಯಿಂದ ಅಥವಾ ಅಂಥ ರೀತಿಯ ವಹಿವಾಟುಗಳಿಂದ 172 ಮೆ । । ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾಂ ವಿರುದ್ಧ ಸಿಬಿಐ ಮತ್ತು ಇನ್ನೊಬ್ಬರು ಉದ್ಭವಿಸಿದ ಅಥವಾ

ಪ್ರಬಲವಾಗಿ ಮತ್ತು ಪ್ರಧಾನವಾಗಿ ಸಿವಿಲ್ ರೂಪದ ಕೆಲವು ಅಪರಾಧಗಳು ಅಥವಾ ವೈವಾಹಿಕತೆ, ಅದರಲ್ಲೂ ನಿರ್ದಿಷ್ಟವಾಗಿ ವರದಕ್ಷಿಣೆ, ಇತ್ಯಾದಿಗಳಿಗೆ ಸಂಬಂಧಿಸಿದ ಅಥವಾ ಕೌಟುಂಬಿಕ ವಿವಾದದಿಂದ ಉದ್ಭವಿಸುವ ಅಂಥ ವ್ಯವಹಾರಗಳು ಮತ್ತು ಅಪರಾಧಗಳಲ್ಲಿ ತಪ್ಪು ಮೂಲತಃ ಬಾಧಿತ ವ್ಯಕ್ತಿಯದೇ ಆಗಿದ್ದು ಮತ್ತು ಅಪರಾಧಿ ಹಾಗೂ ಬಾಧಿತ ವ್ಯಕ್ತಿಯ ನಡುವಿನ ಎಲ್ಲಾ ವಿವಾದಗಳನ್ನು ಅವರು ಸೌಹಾರ್ದಯುತವಾಗಿ ಬಗೆಹರಿಸಿಕೊಂಡಿದ್ದಲ್ಲಿ, ಅಂತಹ ಅಪರಾಧಗಳನ್ನು ರಾಜಿ ಮಾಡಿಸಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸದೆ, ಉಚ್ಚ ನ್ಯಾಯಾಲಯಕ್ಕೆ, ಅಂಥ ಇತ್ಯರ್ಥವು ಮೇಲ್ನೋಟಕ್ಕೆ ಅಪರಾಧಿಯು ಶಿಕ್ಷೆಗೊಳಗಾಗುವ ಸಂಭವನೀಯತೆ ಇಲ್ಲವೇ ಇಲ್ಲ ಮತ್ತು ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಗೊಳಿಸದೆ, ನ್ಯಾಯವು ಅನುದ್ದಿಷ್ಟವಾಗುತ್ತದೆ ಮತ್ತು ನ್ಯಾಯೋದ್ದೇಶಗಳು ವಿಫಲವಾಗುತ್ತವೆ ಎಂದು ಮನವರಿಕೆಯಾದರೆ, ಅದು ತನ್ನ ಅಂತರ್ನಿಹಿತ ಅಧಿಕಾರದ ಚೌಕಟ್ಟಿನೊಳಗೆ, ಕ್ರಿಮಿನಲ್ ವ್ಯವಹರಣೆಯನ್ನು ಅಥವಾ ಕ್ರಿಮಿನಲ್ ದೂರನ್ನು ಅಥವಾ ಎಫ್ಐಆರ್ ಅನ್ನು ರದ್ದು ಮಾಡಬಹುದು ಎಂದು ಅಭಿಪ್ರಾಯಪಟ್ಟಿರುತ್ತದೆ.

21. ಗ್ಯಾನ್ ಸಿಂಗ್ ಪ್ರಕರಣದಲ್ಲಿ ವಿಧಿಸಲಾದ ನಿಯಮಗಳನ್ನು ಮತ್ತು ಅನಿತಾ ಮರಿಯಾ ದಿಯಾಸ್ ಪ್ರಕರಣದಲ್ಲಿನ ಇತ್ತೀಚಿನ ತೀರ್ಪನ್ನು ಪರಿಗಣಿಸಿದ ನಂತರ, ' ಸಿ.ಆರ್.ಪಿ.ಸಿ.ಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಲು ಇದು ಯೋಗ್ಯವಾದ ಪ್ರಕರಣವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ ಮತ್ತು ಆ ತೀರ್ಪುಗಳು ಪ್ರಸ್ತುತ ಪ್ರಕರಣದಲ್ಲೂ ಸೂಕ್ತವಾಗಿ ಅನ್ವಯವಾಗುತ್ತದೆ ಮತ್ತು ಇವು ಹಣಕಾಸಿನ ಅಕ್ರಮದ ಪ್ರಕರಣಗಳಾಗಿದ್ದು ವಂಚನೆಯನ್ನು ಎಸಗಲಾಗಿದೆ ಮತ್ತು ಅರ್ಜಿದಾರನ ವಿರುದ್ಧದ ವ್ಯವಹರಣೆಗಳನ್ನು ನ್ಯಾಯಾಲಯವು ರದ್ದುಪಡಿಸಲಾಗದು 1 ನೇ ಎಂಬ ಪ್ರತಿವಾದಿ ಸಂಖ್ಯೆ 1-ಸಿಬಿಐನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ ಮತ್ತು ಪರ್ಬತ್ ಭಾಯ್ ಆಹಿರ್ನ ಪ್ರಕರಣದಲ್ಲಿ ಎದುರುದಾರರು ಉಲ್ಲೇಖಿಸಿದ ತೀರ್ಪಿನಲ್ಲೂ ಸಹ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಚರ್ಚಿಸಿ ಪ್ರಕರಣವು ಆರಂಭಿಕ ಹಂತದಲ್ಲಿದ್ದು, ಚ ಅಧಿವಿಚಾರಣೆಯು ಪ್ರಾರಂಭವಾಗಿಲ್ಲದಿದ್ದರೆ ಮತ್ತು ಅದು ಅಪರಾಧ ನಿರ್ಣಯದಲ್ಲಿ ಕೊನೆಗೊಂಡಿದ್ದು, ಅಪರಾಧ ನಿರ್ಣಯವು ನಿರಾಶಾದಾಯಕವಾಗುವ ಅವಕಾಶವಿದ್ದರೆ, ಉಚ್ಚ ನ್ಯಾಯಾಲಯವು ತನ್ನ ಅಧಿಕಾರವನ್ನು ಚಲಾಯಿಸಬಹುದು ಎಂಬ ಮಾರ್ಗಸೂಚಿಗಳನ್ನು ಸಹ ಹಾಕಿಕೊಟ್ಟಿದೆ.ವಾಸ್ತವಿಕ ಅಂಶಗಳನ್ನು ಮತ್ತು ಪಕ್ಷಕಾರರ ನಡುವೆ ಆದ ತರುವಾಯದ ಇತ್ಯರ್ಥದ ಬೆಳವಣಿಗೆಗಳನ್ನು ಪರಿಗಣಿಸಿದ ನಂತರ, ಈ ನ್ಯಾಯಾಲಯವು ವ್ಯವಹರಣೆಗಳನ್ನು ರದ್ದುಪಡಿಸಲು ' ಸಿಆರ್ಪಿಸಿ'ಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಬಹುದು ಅಥವಾ ಹಾಗಿಲ್ಲದಿದ್ದಲ್ಲಿ, ನೈಜ ಉದ್ದೇಶವು ವಿಫಲವಾಗುತ್ತದೆ ಮತ್ತು ಇತ್ಯರ್ಥದ ನಂತರವೂ ಸಹ ವ್ಯವಹರಣೆಗಳನ್ನು ಮುಂದುವರೆಸಿದರೆ, ಅದು ನ್ಯಾಯ ಪ್ರಕ್ರಿಯೆಯ ದುರುಪಯೋಗಕ್ಕೆ ಸಮನಾಗಿರುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ.

22. ಈ ಮೇಲೆ ಮಾಡಿದ ಚರ್ಚೆಗಳ ಹಿನ್ನೆಲೆಯಲ್ಲಿ, ನಾನು ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

ಆದೇಶ

ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.

ಸಿಬಿಐ ಸಿ.ಸಿ.ಸಂಖ್ಯೆ:5/2011 ರಲ್ಲಿನ ವ್ಯವಹರಣೆಗಳನ್ನು ಈಗ ವಿಶೇಷ ಸಿಬಿಐ ಸಿ.ಸಿ.ಸಂಖ್ಯೆ:76/2012 ಎಂದು ಸಂಖ್ಯೆ ನೀಡಿ ನಮೂದಿಸಲಾಗಿದ್ದು, ಅವು ಸಿಬಿಐ ವಿಷಯಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯದ ಹಾಗೂ ಬೆಂಗಳೂರಿನ ಮಾನ್ಯ XLVIII ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಬಾಕಿ ಉಳಿದಿವೆ ಮತ್ತು ಸಿಬಿಐ ಸಿ.ಸಿ.ಸಂಖ್ಯೆ:1/2011 ರಲ್ಲಿನ ವ್ಯವಹರಣೆಗಳನ್ನು ಈಗ ವಿಶೇಷ ಸಿಬಿಐ ಸಿ.ಸಿ.ಸಂಖ್ಯೆ: 81/2012 ಎಂದು ಸಂಖ್ಯೆ ನೀಡಿ ನಮೂದಿಸಲಾಗಿದ್ದು, ಅವು ಸಿಬಿಐ ವಿಷಯಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯದ ಹಾಗೂ ಬೆಂಗಳೂರಿನ ಮಾನ್ಯ XLVIII ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಬಾಕಿ ಉಳಿದಿವೆ D ಹಾಗೂ ಅವುಗಳನ್ನು ರದ್ದುಗೊಳಿಸಲಾಗಿದೆ.